UNIVERSAL
LIBRARY
OU_200214
UNIVERSAL
LIBRARY

NARASIMHARAJA WADIYAR SERIES

ಶ್ರೀಯೈನಮಃ.

# ಯುಗಳಾಂಗುರೀಯ

ಬಿ. ವೆಂಕಟಾಚಾರ್ಯರು

M. S. RAO & CO.,
K-SELLERS, BANGALORE CITY

ಯ ೨ ಆಣೆ ]

# ವಿಜ್ಞಾಪನೆ

ಈ ಗ್ರಂಥವು ಪ್ರಸಿದ್ಧರಾಗಿದ್ದ ಶ್ರೀ ಬಂಕಿಂಚಂದ್ರ ಚಟ್ಟೋಪಾಧ್ಯಾಯ ರವರಿಂದ ವಂಗಭಾಷೆಯಲ್ಲಿ ರಚಿತವಾಗಿರುವದರ ಭಾಷಾಂತರವು. ಕಥೆಯು ಚಿಕ್ಕದಾದರೂ ಓದಿದ ಮಾತ್ರದಿಂದಲೇ ಚಮತ್ಕಾರವಾದುದೆಂದು ತಿಳಿಯಬಹುದು, ಇತಿ.

ಮೈಸೂರು }
ಮಾರ್ಚ 1913. }

ಬಿ. ವೆಂಕಟಾಚಾರ್ಯ.

ನನ್ನ ಸಹಧರ್ಮಿಣಿಯಾಗಿ

ಪತಿಪರಾಯಣೆಯಾದ

ಅಕಾಲ ಮೃತ್ಯುವಿಗೆ ಗ್ರಾಸವಾದವಳ

ಸ್ಮರಣಾರ್ಥವಾಗಿ

ಈ

ಗ್ರಂಥವನ್ನು ಪ್ರಚಾರ ಮಾಡಿದ್ದೇನೆ.

ಶ್ರೀಃ



ಶ್ರಿಯೈನಮಃ

# ಮಂಗಳಾಂಗುರೀಯ.

## ಮೊದಲನೆಯ ಪರಿಚ್ಛೇದ.

ಒಂದಾನೊಂದು ಉಪವನಕ್ಕೆ ಸೇರಿದ ಉದ್ಯಾನದೊಂದು ವೃಕ್ಷವಾಟಿಕೆಯಲ್ಲಿಬ್ಬರು ನಿಂತಿದ್ದರು. ನಾವು ಹೇಳುವ ಕಾಲದಲ್ಲಿ, ಪುರಾತನ ತಾಮ್ರಲಿಪ್ತವೆಂಬ ನಗರವು ದೊಡ್ಡದೊಂದು ರೇವಾಗಿ ಅನೇಕ ಹಡಗುಗಳಿಗೆ ನಿಲ್ದಾಣವಾಗಿ ಆಶ್ರಯಸ್ಥಾನವಾಗಿದ್ದಿತು. ಆ ನಗರದ ತಳವನ್ನು ತೊಳೆಯುತ ಅನಂತ ನೀಲಾಕಾಶದಂತಿದ್ದ ಸಮುದ್ರವು ಮೃದುಮೃದುವಾಗಿ ಶಬ್ದವಂ ಮಾಡುತಿದ್ದಿತು.

ತಾಮ್ರಲಿಪ್ತ ನಗರದ ಮುಂಭಾಗ ಸಮುದ್ರದ ತೀರದಲ್ಲೊಂದು ವಿಚಿತ್ರವಾದ ಮಹಡಿಯ ಮನೆ; ಅದರ ಬಳಿ ಅತ್ಯಂತ ರಮಣೀಯವಾಗಿ ನಿರ್ಮಿತವಾಗಿದ್ದೊಂದು ಲತಾಗೃಹ; ಆ ಲತಾಗೃಹಕ್ಕೆ ಧನದಾಸನೆಂಬೊಬ್ಬ ಶೆಟ್ಟಿಯು ಅಧಿಕಾರಿಯಾಗಿದ್ದನು-ಶೆಟ್ಟಿಯ ಮಗಳಾದ ಹಿರಣ್ಮಯಿಯು ಆ ಲತಾಮಂಟಪದಲ್ಲಿ ನಿಂತು ಒಬ್ಬ ಯೌವನ ಪುರುಷನ ಸಂಗಡ ಮಾತಾಡುತಿದ್ದಳು.

ಹಿರಣ್ಮಯಿಗೆ ವಿವಾಹದ ವಯಸ್ಸು ಅತಿಕ್ರಮಿಸಿದ್ದಿತು. ಅವಳು ತನಗಿಷ್ಟವಾದ ಗಂಡನನ್ನು ಪಡೆಯಬೇಕೆಂದು, ಹನ್ನೊಂದು ವರ್ಷದ ವಯಸ್ಸಿನಿಂದ, ಕ್ರಮವಾಗಿ ಐದು ವರ್ಷದಿಂದಾ ಸಮುದ್ರದ ತೀರದಲ್ಲಿ ವಾಸ ಮಾಡುತ್ತ, "ಸಾಗರೇಶ್ವರಿ" ಎಂಬ ದೇವಿಯನ್ನು ಪೂಜೆ ಮಾಡುತಿದ್ದಳು. ಆದರೆ ಅವಳ ಮನೋರಥವು ಸಫಲವಾಗಲಿಲ್ಲ. ಯೌವನ ಪ್ರಾಪ್ತೆಯಾದಾ ಕುಮಾರಿಯು ಏಕಾಂಗಿಯಾಗಿ ಆ ಯೌವನ ಪುರುಷನ ಸಂಗಡ ಮಾತಾಡುತಿದ್ದುದೇಕೆಂಬುದು ನಿಮ್ಮೆಲ್ಲರಿಗೂ ಗೊತ್ತಿರಬಹುದು. ಹಿರಣ್ಮಯಿಯು ನಾಲ್ಕು ವರ್ಷದ ಹುಡುಗಿಯಾಗಿದ್ದಾಗ ಯುವಕನಿಗೆ ಎಂಟು ವರ್ಷ. ಯುವಕನ ತಂದೆಯಾದ ಶಚೀಸೂತ ಶೆಟ್ಟಿಯು ಧನದಾಸನಿಗೆ ನೆರೆಯವನಾಗಿದ್ದನು. ಅದುಕಾರಣ ಹುಡುಗನೂ ಹುಡುಗಿಯೂ ಏಕತ್ರ ಬಾಲ್ಯಸ್ನೇಹಿತರಾಗಿ ಆಡುತಿದ್ದರು. ಅವರೀರ್ವರೂ ಶಚೀಸೂತನ ಮನೆಯಲ್ಲಾಗಲಿ, ಧನದಾಸನ ಮನೆಯಲ್ಲಾಗಲಿ ಸರ್ವದಾ ಸಂಗಾತಿಗಳಾಗಿ ಆಡುತ್ತಿರುವರು. ಈಗಾ ಯುವತಿಗೆ ಹದಿನಾರು ವರ್ಷ; ಯುವಕನಿಗೆ ಇಪ್ಪತ್ತು ವರ್ಷ; ಆದರೂ ಅವರಿಬ್ಬರೂ ತಮ್ಮ ಬಾಲ್ಯಸಖಿತ್ವದ ಸಂಬಂಧವನ್ನು ಬಿಟ್ಟಿರಲಿಲ್ಲ. ಸ್ವಲ್ಪಕಾಲದ ವರೆಗೆ ಆ ಸಂಬಂಧವು ವಿಚ್ಛಿನ್ನವಾಗಿದ್ದಿತು. ಯಥಾಕಾಲದಲ್ಲಿ ಅವರಿಬ್ಬರ ತಂದೆತಾಯಿಗಳು ಆ ಯುವಕ ಯುವತಿಯರಿಗೆ ವಿವಾಹವನ್ನು ಮಾಡಲು ನಿಷ್ಕರ್ಷೆ ಮಾಡಿದ್ದರು- ವಿವಾಹಕ್ಕೆ ಲಗ್ನವೂ ಗೊತ್ತಾಗಿದ್ದಿತು. ಅಕಸ್ಮಾತ್ತಾಗಿ ಬಂದುದಿನ ಹಿರಣ್ಮಯಿಯ ತಂದೆಯು, ತಾನು ವಿವಾಹವನ್ನು ಮಾಡುವುದಿಲ್ಲವೆಂದು ಹೇಳಿಬಿಟ್ಟನು. ಅಂದಿನ ಮೊದಲ್ಗೊಂಡು ಹಿರಣ್ಮಯಿಯು ಪುನಃ ಪುರಂದರನನ್ನು ನೋಡಿರಲಿಲ್ಲ. ಅಂದೊಂದು ವಿಶೇಷ ವಿಷಯವಾಗಿ ಮಾತಾಡುವುದಿದೆಯೆಂತಲೂ ದಯವಿಟ್ಟು ಬಂದು ಹೋಗಬೇಕೆಂದೂ ಅವಳಿಗೆ ಪುರಂದರನು ಹೇಳಿ ಕಳುಹಿದ್ದನು. ಹಿರಣ್ಮಯಿಯು ಲತಾ ಮಂಟಪದ ಬಳಿ ಬಂದು, "ನನ್ನನ್ನು ಕರೆಯಿಸಿದುದೇಕೆ? ನಾನೀಗ ಬಾಲೆಯಲ್ಲ, ವಿಜನವಾದೀ ಪುಷ್ಪವಾಟಿಕೆಗೆ ನಾನೊಬ್ಬಳೇ ಬಂದು ನಿನ್ನ ಸಂಗಡ ಮಾತಾಡುವುದು ಸರಿಯಾಗಿ ಕಾಣುವುದಿಲ್ಲ; ಪುನಃ ಕರೆಯಿಸಿದರೆ ನಾನು ಬರುವುದಿಲ್ಲ" ವೆಂದು ಹೇಳಿದಳು.

ಹದಿನಾರು ವರ್ಷದ ಬಾಲೆಯು, ತಾನು ಬಾಲೆಯಲ್ಲವೆಂದು ಹೇಳು

ವುದು ಬಹಳ ಪುಷ್ಕಳ ಸುರಸ ಪುಷ್ಟವಾದ ಮಾತು. ಆದರೆ ಆ ರಸವನ್ನು ಅನುಭವಿಸುವವರು ಅಲ್ಲಾರೂ ಇರಲಿಲ್ಲ. ಪುರಂದರನ ವಯಸ್ಸು ಅಥವಾ ಅವನ ಮನೋಭಾವವು ಅಂತಹದುದಾಗಿರಲಿಲ್ಲ.

ಪುರಂದರನಾ ಪುಷ್ಪವಾಟಿಕೆಯ ಮೇಲೆ ಹಬ್ಬಿದ್ದ ಲತೆಯಿಂದೊಂದು ಪುಷ್ಪವನ್ನು ಕಿತ್ತುಕೊಂಡು, ಅದನ್ನು ಛಿನ್ನಛಿನ್ನವಾಗಿ ಹರಿದುಹಾಕುತ್ತಾ, "ನಾನು ಪುನಃ ಕರೆಯಿಸುವುದಿಲ್ಲ, ನಾನು ದೂರದೇಶ ಹೊರಟುಹೋಗುತ್ತೇನೆ, ನಿನಗೆ ಹೇಳಿ ಹೋಗೋಣವೆಂದು ಇಲ್ಲಿಗೆ ಬಂದೆನು" ಎಂದನು.

ಹಿರಣ್ಮಯಿ—ದೂರದೇಶಕ್ಕೆ? ಎಲ್ಲಿಗೆ?

ಪುರಂದರ—ಸಿಂಹಳದ್ವೀಪಕ್ಕೆ.

ಹಿರಣ್ಮಯಿ—ಸಿಂಹಳಕ್ಕೆ? ಏಕೆ? ಸಿಂಹಳಕ್ಕೆ ಹೋಗಲೇಕೆ?

ಪುರಂದರ—ಏಕೆ ಹೋಗಬೇಕೆ? ನಾನು ಶೆಟ್ಟಿ. ವ್ಯಾಪಾರಕ್ಕೆ ಸಲವಾಗಿ ಹೋಗುವೆನು.

ಹೀಗೆಂದು ಹೇಳುತಿದ್ದಹಾಗೆ ಪುರಂದರನ ಕಣ್ಣುಗಳಲ್ಲಿ ದರದರನೆ ನೀರು ಸುರಿಯಿತು.

ಹಿರಣ್ಮಯಿಯು ವಿಮನೆಯಾಗಿ, ಆವ ಮಾತನ್ನೂ ಹೇಳದೆ, ಎವೆ ಇಕ್ಕದೆ ತನ್ನೆದುರಿಗಿದ್ದ ಸಾಗರದ ತರಂಗದಲ್ಲಿ ಸೂರ್ಯನ ಕಿರಣಗಳು ಕ್ರೀಡಿಸುತಿದ್ದುದನ್ನು ನೋಡತೊಡಗಿದಳು; ಪ್ರಾತಃಕಾಲ, ತಂಗೊಳ್ದ ತಂಗಾಳಿಯು ಬೀಸುತಿದ್ದಿತು; ಮೃದುಪವನೋಸ್ಥಿತವಾದಾ ಚಿಕ್ಕ ಚಿಕ್ಕ ತರಂಗಗಳಲ್ಲಿ ಬಾಲಾರುಣ ಕಿರಣಗಳು ಬಿದ್ದು ಕಂಪಿತವಾಗುತಿದ್ದುವು; ಸಮುದ್ರದ ನೀರಿನಲ್ಲಿ ಆ ಕಿರಣಗಳ ಅನಂತ ಉಜ್ವಲ ರೇಖೆಗಳು ಪ್ರಸರಿಸುತಿದ್ದುವು; ಶ್ಯಾಮಾಂಗಿಯ ಅಂಗದಲ್ಲಿ ಶುಭ್ರವಾದ ಬೆಳ್ಳಿಯ ಆಭರಣಗಳಂತೆ ಸಮುದ್ರದ ನೊರೆಯು ಶೋಭಿಸುತಿದ್ದಿತು; ಸಮುದ್ರದ ತೀರದಲ್ಲಿ ಜಲಚರ ಪಕ್ಷಿಗಳು ಬಿಳುಪಾದ ರೇಖೆಯಂತೆ ಸಾಲಿಟ್ಟುಕೊಂಡು ಹಾರಾಡುತಿದ್ದುವು; ಹಿರಣ್ಮಯಿಯು ಅವುಗಳನ್ನು ನೋಡಿದಳು, ನೀಲವಾದಾ ಜಲರಾಶಿಯನ್ನು ನೋಡಿದಳು, ತರಂಗಗಳ ಶಿರದಲ್ಲಿ ಫೇನಮಾಲೆಯನ್ನು ನೋಡಿದಳು, ಸೂರ್ಯಕಿರಣಗಳ ಕ್ರೀಡೆಯನ್ನು ನೋಡಿದಳು, ದೂರದಲ್ಲಿದ್ದ ಹಡಗುಗಳನ್ನು ನೋಡಿದಳು, ನೀಲಾಂಬರದಲ್ಲಿ ಕಪ್ಪುಚು

ಕ್ಕಿಯಂತೆ ಹಾರುತಿದ್ದ ಹಕ್ಕಿಯನ್ನು ನೋಡಿದಳು ; ಕಡೆಗೆ ನೆಲದಮೇಲೆ ಬಿದ್ದಿದ್ದೊಂದು ಒಣಗಿದ ಹೂವಿನಮೇಲೆ ದೃಷ್ಟಿಯಿಟ್ಟುಕೊಂಡು, "ನೀನೇ ಕೆ ಹೋಗುಬೇಕು ? ಮಿಕ್ಕತಡವೆಯಲ್ಲೆಲ್ಲಾ ನಿಮ್ಮ ತಂದೆಯೇ ಹೋಗು ತ್ತಿದ್ದರು" ಎಂದಳು.

ಪುರಂದರ—ನಮ್ಮ ತಂದೆಗೆ ವಯಸ್ಸಾಗುತ್ತ ಬಂತು ; ನನಗೆ ಹಣ ವನ್ನು ಸಂಪಾದಿಸುವ ವಯಸ್ಸು ಬಂದಿದೆ ; ನಮ್ಮ ತಂದೆಯ ಅನುಮತಿ ಯನ್ನು ತೆಗೆದುಕೊಂಡಿದ್ದೇನೆ.

ಹಿರಣ್ಮಯಿಯು ಲತಾಮಂಟಪದ ಅಡ್ಡಮರದ ಮೇಲೆ ತಲೆಯನ್ನಿ ಟ್ಟುಕೊಂಡು ಕತ್ತುರುಗಾದಂತವಳಾಗಿ ನಿಂತಳು. ಪುರಂದರನು ನೋಡು ತಿದ್ದಹಾಗೆ ಸುಂದರವಾದ ಮನ್ಮಥನ ರಂಗಭೂಮಿಯಂತಿದ್ದವಳಾ ಲಲಾಟವು ಕುಂಚಿತವಾಯಿತು, ಅಧರವು ಸ್ಫುರಿತವಾಯಿತು, ನಾಸಿಕಾರಂಧ್ರಗಳು ಅರ ಳಿದುವು, ಹಿರಣ್ಮಯಿಯು ಅತ್ತುಬಿಟ್ಟಳು.

ಪುರಂದರನು ಮುಖವನ್ನು ತಿರುಗಿಸಿಕೊಂಡನು. ಅವನೂ ಒಂದು ತಡವೆ ಆಕಾಶವನ್ನು ನೋಡಿದನು, ನೆಲವನ್ನು ನೋಡಿದನು, ನಗರವನ್ನು ನೋಡಿದನು, ಸಮುದ್ರವನ್ನು ನೋಡಿದನು, ಎಲ್ಲವನ್ನೂ ನೋಡಿದನು, ಅದಾವದರಿಂದಲೂ ನಿಲ್ಲದ ಕಣ್ಣೀರು ಹರಿದು ಅವನ ಕಪೋಲವು ತೋಯಿದು ಹೋಯಿತು. ಪುರಂದರನು ಕಣ್ಣೀರನ್ನೊರಸಿಕೊಂಡು, "ನಿನಗೆ ಸಂಗತಿ ಯನ್ನು ತಿಳಿಸಿ ಹೋಗೋಣವೆಂದು ಇಲ್ಲಿಗೆ ಪುನಃ ಬಂದೆನು, ನಿಮ್ಮ ತಂದೆಯು ನಿನ್ನನ್ನೆನಗೆ ಕೊಟ್ಟು ಮದುವೆಯನ್ನು ಮಾಡುವುದಿಲ್ಲವೆಂದು ಎಂದು ಹೇಳಿದನೋ, ಅಂದಿನದ ಮೊದಲ್ಗೊಂಡು ಸಿಂಹಳದ್ವೀಪಕ್ಕೆ ಹೊರಟು ಹೋಗಬೇಕೆಂದು ಸಂಕಲ್ಪವಂ ಮಾಡಿಕೊಂಡೆನು. ಸಿಂಹಳದ್ವೀಪದಿಂದ ಹಿಂದಿರುಗಿ ಬರಕೂಡದೆಂತಲೂ ಯೋಚಿಸಿಕೊಂಡಿದೇನೆ, ನಿನ್ನ ಜ್ಞಾಪಕವು ಶುದ್ಧವಾಗಿ ಮರೆತುಹೋದರೆ ಆಗ ಹಿಂದಿರುಗಿ ಬರುವೆನು ; ನನಗೆ ಹೆಚ್ಚು ಮಾತುಗಳನ್ನು ಹೇಳುವುದಕ್ಕೆ ತೋಚುವುದಿಲ್ಲ, ಹೆಚ್ಚು ಮಾತುಗಳನ್ನು ಹೇಳಿದರೆ ನೀನೂ ತಿಳಿಯಲಾರೆ ; ಇಷ್ಟೊಂದು ಮಾತ್ರ ತಿಳಿಯಹೇಳು ವೆನು ; ಏನೆಂದರೆ, ನನ್ನ ಪಾಲಿಗೆ ಜಗತ್ತಿನ ಸಂಸಾರವೆಲ್ಲ ಒಂದು ತೂಕ, ನೀನೊಂದು ತೂಕ, ಆದರೆ ಜಗತ್ತೆಲ್ಲ ಸೇರಿದರೂ ನಿನ್ನ ತೂಕಕ್ಕೆ ಸಮ

ನಾಗದು, ಅಷ್ಟೊಂದು ಹೇಳಬಲ್ಲೆನು ; ಹೆಚ್ಚು ಹೇಳಲಾರೆನು" ಎಂದು ಹೇಳಿ ಬೇರೆಕಡೆ ತಿರುಗಿ ಹತ್ತು ಹೆಜ್ಜೆಗಳು ಹೋಗಿ ಮತ್ತೊಂದು ಮರ ದೊಂದೆಲೆಯನ್ನು ಕಿತ್ತುಕೊಂಡನು ; ಕಣ್ಣೀರಿನ ವೇಗವು ಸ್ವಲ್ಪ ಕಡಿಮೆ ಯಾದ ಬಳಿಕ ಹಿಂದಿರುಗಿ ಬಂದು, "ನೀನೆನ್ನನ್ನು ಬಹಳವಾಗಿ ಪ್ರೀತಿಸು ತ್ತಿಯೆಂದು ಚೆನ್ನಾಗಿ ಬಲ್ಲೆನು ; ಆದರೆ ನೀನೊಂದು ದಿನ ಅನ್ಯನಿಗೆ ಪತ್ನಿ ಯಾಗುವೆಯಾದಕಾರಣ ನನ್ನನ್ನು ಜ್ಞಾಪಿಸಿಕೊಳ್ಳಬೇಡ, ಮರೆತುಬಿಡು. ನಿನಗೂ ನನಗೂ ಇದೇ ಕಡೆಯ ಸಂದರ್ಶನ, ಪುನಃ ನಾನು ನಿನ್ನನ್ನು ನೋಡಲಾರೆನೆಂದು ತೋರುತ್ತದೆ" ಎಂದು ಹೇಳಿದನು.

ಅಷ್ಟು ಹೇಳಿ ಪುರಂದರನು ಹೊರಟುಹೋದನು. ಹಿರಣ್ಮಯಿಯು ಅಳುವುದಕ್ಕೆ ಪ್ರಾರಂಭಿಸಿದಳು. ಅಳುವನ್ನು ನಿಲ್ಲಿಸಿ, ಮನಸ್ಸಿನಲ್ಲಿ, "ನಾನಿಂದು ಸತ್ತುಹೋದರೆ ಪುರಂದರನು ಸಿಂಹಳದ್ವೀಪಕ್ಕೆ ಹೋಗಬ ಲ್ಲನೆ? ನಾನು ಕುತ್ತಿಗೆಗೆ ಲತೆಯನ್ನು ಬಿಗಿದುಕೊಂಡು ಸಾಯಕೂಡ ದೇಕೆ? ಅಥವಾ ಸಮುದ್ರದಲ್ಲಿ ಮುಳುಗಿ ಹೋಗಕೂಡದೇಕೆ?" ಎಂದು ಭಾವಿಸಿಕೊಂಡು, ಪುನಃ "ನಾನು ಸತ್ತ ಬಳಿಕ ಪುರಂದರನು ಸಿಂಹಳದ್ವೀ ಪಕ್ಕೆ ಹೋದರೇನು, ಬಿಟ್ಟರೇನು? ಅದರಿಂದ ನನಗೇನಾದಂತಾಯಿತು?" ಎಂದಂದುಕೊಂಡು ಪುನಃ ಅಳುತ್ತ ಕುಳಿತುಕೊಂಡಳು.

## ಎರಡನೆಯ ಪರಿಚ್ಛೇದ.

ಧನದಾಸನು ಮಗಳನ್ನು ಪುರಂದರನಿಗೆ ಕೊಟ್ಟು ಮದುವೆ ಮಾಡು ವುದಿಲ್ಲವೆಂದೇಕೆ ಹೇಳಿದನೋ ಅದಾರಿಗೂ ತಿಳಿಯದು. ಅವನಾ ವಿಚಾರ ವನ್ನಾರ ಸಂಗಡಲೂ ಹೇಳಲಿಲ್ಲ. ಅವನನವರಾರಾದರೂ ಕೇಳಿದರೆ, "ವಿಶೇ ಷವಾದೊಂದು ಕಾರಣವಿದೆ" ಎಂದು ಹೇಳುತ್ತಿದ್ದನು. ಅನೇಕರು ಬಂದು ಹೆಣ್ಣನ್ನು ಕೇಳಿದರು. ಧನದಾಸನು ಅವರಾರ ಸಂಬಂಧವನ್ನು ಬೆಳೆಯಿಸು ವುದಕ್ಕೂ ಸಮ್ಮತಿಸಲಿಲ್ಲ. ವಿವಾಹದ ಪ್ರಸ್ತಾವವನ್ನೇ ಕಿವಿಗೆ ಹಾಕಿಕೊ ಳ್ಳನು. ಹುಡುಗಿಯು ದೊಡ್ಡವಳಾದಳೆಂದವಳ ತಾಯಿಯು ಆಕ್ಷೇಪಣೆಯಂ

ಮಾಡುತ್ತಿದ್ದಳು ; ಧನದಾಸನದಕ್ಕೆ ಕಿವಿಕೊಡುತ್ತಿರಲಿಲ್ಲ ; "ನಮ್ಮ ಗುರುಗಳು ಬರಲಿ ; ಅವರು ಬಂದ ಬಳಿಕ ಆ ಪ್ರಸ್ತಾವವಂ ಮಾಡೋಣ" ಎಂದು ಹೇಳುವನು.

ಪುರಂದರನು ಸಿಂಹಳದ್ವೀಪಕ್ಕೆ ಹೊರಟುಹೋದನು. ಅವನು ಸಿಂಹಳಕ್ಕೆ ಹೊರಟುಹೋಗಿ ಎರಡು ವರ್ಷಗಳಾದುವು ; ಹಿಂದಿರಿಗಿ ಬರಲಿಲ್ಲ. ಹಿರಣ್ಮಯಿಗೆ ಮದುವೆಯಾಗಲಿಲ್ಲ. ಅವಳು ಹದಿನೆಂಟು ವರ್ಷದ ಯೌವನದವಳಾಗಿ, ಉದ್ಯಾನದ ಮಧ್ಯೆ ನವಪಲ್ಲವಿತ ಚೂತವೃಕ್ಷದಂತೆ ಧನದಾಸನ ಗೃಹದಲ್ಲಿ ಶೋಭಿಸುತಿದ್ದಳು.

ಹಿರಣ್ಮಯಿಯು ಅದರಿಂದ ದುಃಖಿತೆಯಾಗಲಿಲ್ಲ. ಮದುವೆಯ ಮಾತು ಬಂದರೆ ಅವಳಿಗೆ ಪುರಂದರನ ಜ್ಞಾಪಕವು ಬರುವುದು, ಅವನಾ ಫುಲ್ಲಕುಸುಮ ಮಾಲಾಮಂಡಿತ ಕುಂಚಿತ ಕೃಷ್ಣ ಕುಂತಲಾವೇಷ್ಟಿತವಾದ ಸಹಾಸವಾದ ಮುಖಮಂಡಲವು ಜ್ಞಾಪಕಕ್ಕೆ ಬರುವುದು ; ಅವನ ಪದ್ಮಸದೃಶ ಹಸ್ತದ ವಜ್ರದುಂಗುರಗಳುಳ್ಳ ಬೆರಳುಗಳು ಜ್ಞಾಪಕಕ್ಕೆ ಬರುತಿದ್ದುವು ; ಹಾಗೆ ನೆನವಿಗೆ ಬರುತ್ತಲೆ ಹಿರಣ್ಮಯಿಯು ಅಳುವುದಕ್ಕೆ ತೊಡಗುವಳು. ತಂದೆಯು ಅವಳನ್ನಾರಿಗೆ ಕೊಟ್ಟರೂ ಮದುವೆಯಾಗಬೇಕು; ತಂದೆಯ ಅಪ್ಪಣೆಯನ್ನು ಮೀರುವುದಕ್ಕಿಲ್ಲ ; ಆದರೆ ಬೇರೆ ಮನುಷ್ಯನೊಂದಿಗೆ ಸಂಬಂಧವು ಬೆಳದರೆ ಜೀವನ್ಮೃತೆಯಾಗಿರಬೇಕು.

ಹಾಗಿದ್ದರೂ, ತಂದೆಯು ಅವಳ ವಿವಾಹೋದ್ಯೋಗದಲ್ಲಿ ಶುದ್ಧವಾಗಿ ಪ್ರವೃತ್ತನಾಗದಿರುವುದನ್ನು ಕಂಡು ಹಿರಣ್ಮಯಿಯು ಆಶ್ಚರ್ಯಪಡುವಳು. ಜನರು ಹೆಣ್ಣುಹುಡುಗರನ್ನು ಆ ವಯಸ್ಸಿನ ವರೆಗೂ ಮದುವೆಯಿಲ್ಲದೆ ಮನೆಯಲ್ಲಿಟ್ಟುಕೊಳ್ಳುವುದಿಲ್ಲ. ಒಮ್ಮೆ ಇಟ್ಟುಕೊಂಡರೂ ಅವರಿಗೆ ಮದುವೆಯಂ ಮಾಡಿ ಮನೆಯಲ್ಲಿಟ್ಟುಕೊಳ್ಳುವರು. ತಂದೆಯು ಅವಳ ಮದುವೆಯ ವಿಚಾರವಾಗಿ ಜನರಾರು ಬಂದು ಹೇಳಿದರೂ ಕಿವಿಗೆ ಹಾಕಿಕೊಳ್ಳನೇಕೆ ? ಒಂದು ದಿನ ಅವಳಿಗೆ ಅಕಸ್ಮಾತ್ತಾಗಿ ಅದರ ವಿಷಯದಲ್ಲಿ ಸ್ವಲ್ಪ ಸೂಚನೆಯು ಸಿಕ್ಕಿತು.

ಧನದಾಸನು ಅನೇಕ ವ್ಯಾಪಾರವನ್ನು ನಡೆಯಿಸುವುದರಲ್ಲಿ ಚೀನಾದೇಶದ ವಿಚಿತ್ರವಾದೊಂದು ಭರಣಿಯು ಸಿಕ್ಕಿತು. ಭರಣಿಯು ಬಹಳ

ದೊಡ್ಡದಾಗಿದ್ದಿತು. ಧನದಾಸನ ಹೆಂಡತಿಯು ಅದರಲ್ಲಿ ತನ್ನ ಒಡವೆಗಳ ನ್ನಿಡುವಳು. ಧನದಾಸನು ಹೊಸದಾಗಿ ಕೆಲವು ಒಡವೆಗಳನ್ನು ಮಾಡಿಸಿ ಹೆಂಡತಿಗೆ ಉಪಹಾರವಾಗಿ ಕೊಟ್ಟನು. ಶ್ರೇಷ್ಠಿಯ ಪತ್ನಿಯು ಹಳೆಯ ಒಡವೆಗಳನ್ನೆಲ್ಲ ಭರಣಿಯ ಸಮೇತವಾಗಿ ಮಗಳಿಗೆ ಕೊಟ್ಟಳು. ಹಿರಣ್ಮ ಯಿಯು ಆ ಆಭರಣಗಳನ್ನು ಇಟ್ಟು ತೆಗೆಯುವುದರಲ್ಲಿ ಅವಳಿಗೊಂದು ಬರೆ ದಿದ್ದ ಕಾಗದದ ಚೂರು ಸಿಕ್ಕಿತು. ಬರವಣಿಗೆಯು ಪೂರ್ತಿಯಾಗಿರಲಿಲ್ಲ.

ಹಿರಣ್ಮಯಿಗೆ ಓದುವುದಕ್ಕೆ ಬರುತಿದ್ದಿತು. ಆ ಚೂರು ಕಾಗದದಲ್ಲಿ ಪ್ರಾರಂಭದಲ್ಲೇ ತನ್ನ ಸ್ವಂತ ಹೆಸರು ಬರೆದಿತ್ತಾದುದರಿಂದ ಕೌತೂಹಲಾ ವಿಷ್ಟೆಯಾಗಿ ಅದನ್ನೋದಿದಳು. ಕಾಗದವು ಅರ್ಧವೇ ಇದ್ದುದರಿಂದ ಪೂರಾ ಅರ್ಥವಾಗಲಿಲ್ಲ. ಅದಾರಾರಿಗೆ ಬರೆದುದು, ಬರೆದಿದ್ದುದೇಕೆಂಬು ದು ಗೊತ್ತಾಗಲಿಲ್ಲ. ಆದರೂ ಅದರಲ್ಲಿದ್ದಷ್ಟು ಓದಿದುದರಿಂದ ಅವಳಿಗೆ ಬಹು ಭಯ ಉಂಟಾಯಿತು ; ಹರಿದ ಚೂರು ಕಾಗದದಲ್ಲಿ ಬರೆದಿದ್ದುದೇ ನೆಂದರೆ :—

ಜಾತಕವನ್ನು ಗುಣಿಸಿನೋಡಲಾ.........

......ಹಿರಣ್ಮಯಿಯಂತಹ ಸುವರ್ಣಪುತ್ತಲಿ.........

......ವಾಹವಾದರೆ ಭಯಂಕರವಾದ ವಿಪತ್ತು.........

.........ರುಷ......ಮುಖವನ್ನು ಪರಸ್ಪರ.........

...ಗಬಹುದು...............

ಹಿರಣ್ಮಯಿಯು ಗೋಚರವಿಲ್ಲದ ವಿಪತ್ತಿನ ಶಂಕೆಯನ್ನು ಹಚ್ಚಿ ಕೊಂಡು ಅತ್ಯಂತ ಭೀತೆಯಾದಳು. ಅವಳಾರಿಗೂ ಏನನ್ನೂ ಹೇಳದೆ ಕಾಗದದ ಚೂರನ್ನು ತೆಗೆದಿಟ್ಟುಕೊಂಡಳು.

## ಮೂರನೆಯ ಪರಿಚ್ಛೇದ.

ಎರಡು ವರ್ಷಗಳ ಮೇಲೆ ಮತ್ತೊಂದು ವರ್ಷವಾಯಿತು : ಆದರೂ ಪುರಂದರನು ಸಿಂಹಳದಿಂದ ಹಿಂದಿರಿಗಿ ಬರುವ ಸಮಾಚಾರವಿಲ್ಲ ; ಆದರೆ

ಹಿರಣ್ಮಯಿಯ ಹೃದಯದಲ್ಲಿ ಅವನಾ ಮನ್ಮಥ ಸದೃಶವಾದ ಮೂರ್ತಿಯು ಪೂರ್ವದಂತೆ ಉಜ್ವಲವಾಗಿದ್ದಿತು. ಅವಳು ತನ್ನ ಮನಸ್ಸಿನಲ್ಲಿ, "ಪುರಂದರನು ನನ್ನನ್ನು ಮರೆತಿರಲಾರನು, ಹಾಗೆ ಮರೆತಿದ್ದರೆ ಹಿಂದಿರುಗುತಿದ್ದನು" ಎಂದು ತಿಳಿದುಕೊಂಡಳು.

ಹೀಗೆ ಎರಡು ವರ್ಷಗಳು ಕಳೆದುವು. ಮತ್ತೊಂದು ವರ್ಷವೂ ಕಳೆಯಿತು. ಒಂದು ದಿನ ಅಕಸ್ಮಾತ್ತಾಗಿ ಧನದಾಸನು, "ಎಲ್ಲರೂ ಹೊರಡಿ, ಸಪರಿವಾರವಾಗಿ ಕಾಶೀಗೆ ಹೋಗುಬೇಕು, ಗುರುಗಳ ಸನ್ನಿಧಿಯಿಂದ ಶಿಷ್ಯನು ಬಂದಿದ್ದಾನೆ, ಅಲ್ಲಿಗೆ ಬರಬೇಕೆಂದು ಗುರುಗಳ ಅನುಜ್ಞೆಯಾಗಿದೆ, ಅಲ್ಲೇ ಹಿರಣ್ಮಯಿಗೆ ಮದುವೆಯಾಗುಬೇಕು, ಅಲ್ಲಿ ಮೂರು ವರಗಳನ್ನು ಗೊತ್ತು ಮಾಡಿದ್ದಾರೆ" ಎಂದು ಹೇಳಿದನು.

ಧನದಾಸನು ಹೆಂಡತಿಯನ್ನೂ ಮಗಳನ್ನೂ ಸಂಗಡ ಕರೆದುಕೊಂಡು ಕಾಶೀಗೆ ಹೊರಟನು. ಸರಿಯಾದ ಕಾಲದಲ್ಲಿ ಕಾಶೀಗೆ ಸೇರಿದ ಬಳಿಕ ಧನವಾಸನ ಗುರುವಾದ ಆನಂದಸ್ವಾಮಿಯು ಬಂದು ದರ್ಶನವಂ ಕೊಟ್ಟು ವಿವಾಹಕ್ಕೆ ಲಗ್ನವನ್ನು ನಿಷ್ಕರ್ಷೆ ಮಾಡಿ ಶಾಸ್ತ್ರೋಕ್ತವಾಗಿ ಅಣಿಮಾಡಬೇಕೆಂದು ಅಪ್ಪಣೆಯಂ ಕೊಟ್ಟನು.

ಮದುವೆಗೆ ಶಾಸ್ತ್ರೋಕ್ತವಾಗಿ ಬೇಕಾದುದೆಲ್ಲ ಹವಣರಿತು ಅಚ್ಚುಗಟ್ಟಾಗಿ ಹವಣಿಸಲ್ಪಟ್ಟದ್ದಿತು; ಆದರೆ ಗದ್ದಲವಿಲ್ಲ; ಗುಂಪು ಕೂಡಲಿಲ್ಲ; ಧನದಾಸನ ಜನರಿಗೆ ಹೊರತು ಮತ್ತಾರಿಗೂ ಮದುವೆಯ ಸಮಾಚಾರವು ತಿಳಿಯದು; ಕೇವಲ ಶಾಸ್ತ್ರೀಯವಾಗಿ ಆಗಬೇಕಾದುದು ಸಿದ್ಧವಾಯಿತು.

ವಿವಾಹದ ದಿನ ಸಾಯಂಕಾಲವೂ ಬಂತು. ರಾತ್ರಿ ಧನುರ್ಲಗ್ನದಲ್ಲಿ ಮುಹೂರ್ತವಿಟ್ಟದ್ದಿತು. ಮನೆಯಲ್ಲಿದ್ದವರು ಹೊರತು ಮತ್ತಾರೂ ಬಂದಿರಲಿಲ್ಲ, ನೆರೆಹೊರೆಯವರೂ ಬಂದಿರಲಿಲ್ಲ, ಅದುವರೆಗೆ ಧನದಾಸನಿಗೆ ಹೊರ್ತು ಮತ್ತಾರಿಗೂ ವರನಾರೆಂಬುದು ಗೊತ್ತಾಗಲಿಲ್ಲ; ಅವನಾವ ಊರಿನವನೆಂಬುದೂ ತಿಳಿಯದು. ಆದರೆ ಆನಂದಸ್ವಾಮಿಯು ವರನನ್ನು ಗೊತ್ತುಮಾಡಿದ್ದುದರಿಂದ ಅಪಾತ್ರನಾಗಿರನೆಂದು ಎಲ್ಲರಿಗೂ ಚೆನ್ನಾಗಿ ನಂಬುಗೆಯಿದ್ದಿತು. ಅವನು ವರನ ಪರಿಚಯುವನ್ನೇಕೆ ಹೇಳಲಿಲ್ಲವೋ ಅದವನಿಗೆ ತಿಳಿಯಬೇಕು. ಅವನ ಮನಸ್ಸಿನಲ್ಲಿರುವುದು ಇತರರಿಗೆ ತಿಳಿಯುವ

ಬಗೆ ಹೇಗೆ? ಒಂದು ಚಿಕ್ಕಮನೆಯಲ್ಲೊಬ್ಬ ಪುರೋಹಿತನು ಸಂಪ್ರದಾನದ ಸಾಮಗ್ರಿಗಳನ್ನಿಟ್ಟುಕೊಂಡು ಏಕಾಂಗಿಯಾಗಿ ಕುಳಿತಿದ್ದನು. ಧನದಾಸನೊಬ್ಬನೇ ಬಾಗಿಲಹೊರಗೆ ವರಾಗಮನವನ್ನೆದುರು ನೋಡುತ್ತ ನಿಂತಿದ್ದನು. ಒಳಗೆ ಅಂತಃಪುರದಲ್ಲಿ ಕನ್ಯೆಯು ಸಾಲಂಕೃತೆಯಾಗಿ ಕುಳಿತಿದ್ದಳು. ಮತ್ತಾರೂ ಇರಲಿಲ್ಲ, ಹಿರಣ್ಮಯಿಯು ಮನಸ್ಸಿನಲ್ಲಿ, ಇದೇನು ರಹಸ್ಯ; ಹೇಗಾದರೂ, ಪುರಂದರನಿಗೇನೋ ಕೊಟ್ಟು ಮದುವೆಯಾಗುವುದಿಲ್ಲ; ಆವನಿಗಾದರೂ ಮದುವೆಯಾಗಲಿ; ಅನ್ಯನಾವನೇ ಆಗಲಿ, ಅವನೆನಗೆ ಎನೆಯನಾಗುವುದಿಲ್ಲ; ನಾನವನಿಗೆ ಎನೆಯುಳಾಗೆನು; ಅದು ಖಂಡಿತವೆಂದಂದುಕೊಂಡಳು.

ಆ ಸಮಯದಲ್ಲಿ ಧನದಾಸನು ಮದುವೆಯ ಹೆಣ್ಣನ್ನು ಕರೆಯಲು ಬಂದನು. ಅವಳನ್ನು ವಿವಾಹಮಂಟಪಕ್ಕೆ ಕರೆದುಕೊಂಡು ಹೋಗುವುದಕ್ಕೆ ಮುಂಚಿತವಾಗಿ ತಂದೆಯು ಅವಳೆರಡು ಕಣ್ಣುಗಳನ್ನು ಬಟ್ಟೆಯಿಂದ ಭದ್ರವಾಗಿ ಕಟ್ಟಿದನು. ಹಿರಣ್ಮಯಿಯು, "ಅಪ್ಪಾ! ಇದೇನು?" ಎಂದು ಕೇಳಿದಳು. ಧನದಾಸನು, "ಗುರುಗಳ ಅಪ್ಪಣೆ" ಎಂದು ಹೇಳಿದನಲ್ಲದೆ, "ನೀನು ನನ್ನಪ್ಪಣೆಯಪ್ರಕಾರ ನಡೆಯಬೇಕು, ಮಂತ್ರಗಳನ್ನೆಲ್ಲ ಮನಸ್ಸಿನಲ್ಲಿ ಹೇಳಿಕೊಳ್ಳಬೇಕು" ಎಂತಲೂ ಹೇಳಿದನು. ಹಿರಣ್ಮಯಿಯು ಕೇಳಿ ಅದಕ್ಕೆ ಉತ್ತರವನ್ನು ಕೊಡಲಿಲ್ಲ. ಧನದಾಸನು ದೃಷ್ಟಿಹೀನೆಯಾದಾ ಕನ್ಯೆಯನ್ನು ಕೈಹಿಡಿದುಕೊಂಡು ಸಂಪ್ರದಾನಮಂಟಪಕ್ಕೆ ಕರೆದುಕೊಂಡು ಹೋದನು.

ಹಿರಣ್ಮಯಿಯು ಸಂಪ್ರದಾನಮಂಟಪಕ್ಕೆ ಕರೆತರಲ್ಪಟ್ಟವಳು ಕಣ್ಣು ಬಿಟ್ಟು ನೋಡಬಹುದಾಗಿದ್ದರೆ ಪಾತ್ರನೂ ಅವಳಂತೆ ಆವೃತನಯನನಾಗಿದ್ದನೆಂದು ತಿಳಿಯುತಿದ್ದಳು, ಈಪ್ರಕಾರ ವಿವಾಹವಾಯಿತು. ಆ ಸ್ಥಳದಲ್ಲಿ ಗುರು, ಪುರೋಹಿತ, ಹೆಣ್ಣಿನ ತಂದೆ ಇವರ ಹೊರ್ತು ಮತ್ತಾರೂ ಇರಲಿಲ್ಲ. ವಧೂವರರಿಬ್ಬರೂ ಆರನ್ನೂ ನೋಡಲಿಲ್ಲ. ಪರಸ್ಪರ ಶಾಸ್ತ್ರೋಕ್ತವಾಗಿ ಶುಭದೃಷ್ಟಿಯಾಗಲಿಲ್ಲ.

ಸಂಪ್ರದಾನಾನಂತರದಲ್ಲಿ ಆನಂದಸ್ವಾಮಿಯು ವಧೂವರರನ್ನು ಕುರಿತು, "ನಿಮ್ಮಿಬ್ಬರಿಗೂ ವಿವಾಹವಾಯಿತು, ನೀವಿಬ್ಬರೂ ಪರಸ್ಪರ ನೋಡ

ಕೂಡದು ; ಕನ್ಯೆಗೆ ಕನ್ಯಾತ್ವವನ್ನು ಹೋಗಲಾಡಿಸುವುದೇ ಈ ವಿವಾಹದ ಉದ್ದೇಶವಾಗಿದೆ. ಈ ಜನ್ಮದಲ್ಲಿ ನೀವಿಬ್ಬರೂ ಪರಸ್ಪರ ನೋಡುವಿರೋ ಇಲ್ಲವೋ ಅದನ್ನು ಹೇಳುವುದಕ್ಕಾಗುವುದಿಲ್ಲ. ಒಂದುವೇಳೆ ನೋಡಿದರೂ ಪರಸ್ಪರ ಗುರುತು ಹಿಡಿಯಲಾರಿರಿ, ಗುರುತು ಹಿಡಿಯುವುದಕ್ಕೆ ನಾನೊಂದುಪಾಯವನ್ನು ತೋರಿಸಿಕೊಡುವೆನು; ನನ್ನ ಕೈಯಲ್ಲೀಗ ಎರಡು ಉಂಗುರಗಳಿವೆ; ಎರಡೂ ಒಂದೇಪ್ರಕಾರವಾಗಿ ಮಾಡಲ್ಪಟ್ಟುದು ; ಉಂಗುರಕ್ಕೆ ಹಾಕಿರುವ ಹರಳುಗಳು ಪ್ರಾಯಶಃ ಎಲ್ಲಿಯೂ ಸಿಕ್ಕತಕ್ಕುವಲ್ಲ ; ಎರಡು ಉಂಗುರಗಳ ಹರಳುಗಳಲ್ಲಿಯೂ ಹಿಂದುಗಡೆಯಲ್ಲಿ ಒಂದೊಂದು ಮಯೂರವನ್ನು ಒಂದೇ ಸಮನಾಗಿ ಕೆತ್ತಿದೆ ; ಒಂದುಂಗುರವನ್ನು ವರನಿಗೂ ಒಂದುಂಗುರವನ್ನು ವಧುವಿಗೂ ಕೊಡುವೆನು ; ಅಂತಹ ಉಂಗುರವು ಮತ್ತಾರಿಗೂ ಸಿಗದು, ಮತ್ತಾರಲ್ಲಿಯೂ ಇಲ್ಲ. ಅದರಲ್ಲಿ ಕೆತ್ತಲ್ಪಟ್ಟಿರುವ ಮಯೂರವು ಬೇರೊಬ್ಬರು ಕೆತ್ತುವುದಕ್ಕಾಗುವುದಿಲ್ಲ ; ನಾನೇ ಸ್ವಂತವಾಗಿ ಕೆತ್ತಿ ಮಾಡಿದುದು ; ವಧುವಾವ ಪುರುಷನ ಕೈಯಲ್ಲಿ ಉಂಗುರವನ್ನು ನೋಡುವಳೋ ಅವನೇ ಅವಳಿಗೆ ಪತಿಯು ; ಅದೇಪ್ರಕಾರ ವರನಾವಳ ಕೈಯಲ್ಲಿ ಉಂಗುರವನ್ನು ನೋಡುವನೋ ಅವಳೇ ಅವನಿಗೆ ಪತ್ನಿ ; ನೀವಿಬ್ಬರೂ ಈ ಉಂಗುರಗಳನ್ನು ಕಳೆಯಕೂಡದು, ಅವುಗಳನ್ನಾರಿಗೂ ಕೊಡಕೂಡದು, ಅನ್ನಕ್ಕೆ ಇಲ್ಲದಿದ್ದರೂ ಅದನ್ನು ಮಾರಕೂಡದು ; ಅಲ್ಲದೆ ಇಂದಿನ ಮೊದಲ್ಗೊಂಡು ಐದುವರ್ಷಗಳ ತನಕ ನಿಮ್ಮಿಬ್ಬರಲ್ಲೊಬ್ಬರೂ ಈ ಉಂಗುರಗಳನ್ನು ಧರಿಸಕೂಡದು ; ಇಂದು ಮಾಘಶುದ್ಧ ಪಂಚಮಿ, ರಾತ್ರಿ ಹನ್ನೊಂದು ಘಳಿಗೆ ಮೇಲಾಗಿದೆ, ಮುಂದೆ ಐದನೆಯ ವರ್ಷದ ಮಾಘಶುದ್ಧ ಪಂಚಮಿಯ ರಾತ್ರಿ ಹನ್ನೊಂದು ಘಳಿಗೆಗಳಾಗುವವರೆಗೆ ಈ ಉಂಗುರಗಳನ್ನು ನೀವಾರೂ ಧರಿಸಕೂಡದು, ಧರಿಸುವುದನ್ನು ನಿಷೇಧಿಸಿದ್ದೇನೆ ; ನನ್ನೀ ಅಪ್ಪಣೆಯನ್ನು ಮೀರಿದರೆ ಗುರುತರವಾದ ಅಮಂಗಳವು ಸಂಭವಿಸುವುದು " ಎಂದು ಹೇಳಿದನು.

ಹೀಗೆಂದು ಹೇಳಿ ಆನಂದಸ್ವಾಮಿಯು ಹೊರಟುಹೋದನು. ಧನದಾಸನು ಮಗಳ ಕಣ್ಣುಗಳನ್ನು ಬಿಚ್ಚಿದನು. ಹಿರಣ್ಮಯಿಯು ಕಣ್ಣುಬಿಟ್ಟು ನೋಡಿದಳು; ಪುರೋಹಿತನೂ ಅವಳ ತಂದೆಯೂ ಅಲ್ಲಿಬ್ಬರೇ ಇದ್ದರು ;

ಅವಳಿಗೆ ಮದುವೆಯಾದ ಗಂಡನು ಅಲ್ಲಿರಲಿಲ್ಲ. ವಿವಾಹದಾ ರಾತ್ರಿ ಅವಳೊಬ್ಬಳೇ ಕಾಲಯಾಪನೆಯನ್ನು ಮಾಡಿದಳು.

## ನಾಲ್ಕನೆಯ ಪರಿಚ್ಛೇದ.

ವಿವಾಹವಾದ ಬಳಿಕ ಧನದಾಸನು ಹೆಂಡತಿಯನ್ನೂ ಮಗಳನ್ನೂ ಕರೆದುಕೊಂಡು ಸ್ವದೇಶಕ್ಕೆ ಬಂದನು. ನಾಲ್ಕು ವರ್ಷಗಳು ಕಳೆದುಹೋದುವು. ಪುರಂದರನು ಹಿಂದಿರುಗಿ ಬರಲಿಲ್ಲ. ಹಿರಣ್ಮಯಿಗೆ ಅವನು ಹಿಂದಿರುಗಿ ಬಂದರೇನು, ಬಾರದಿದ್ದರೇನು ? ಎರಡೂ ಸಮ.

ಪುರಂದರನು ಏಳು ವರ್ಷಗಳಾದರೂ ಬರಲಿಲ್ಲವೆಂದು ಹಿರಣ್ಮಯಿಯು ಸ್ವಲ್ಪ ದುಃಖಿತೆಯಾದಳು. ಅವಳು ಮನಸ್ಸಿನಲ್ಲಿ, "ನನ್ನನ್ನು ಇನ್ನೂ ಜ್ಞಾಪಕದಲ್ಲಿಟ್ಟುಕೊಂಡಿರುವುದರಿಂದ ಬರಲಿಲ್ಲವೆಂದು ಹೇಳುವುದು ಅಸಂಭವವಾಗುವುದು. ಅವನು ಜೀವದಿಂದಿರುವನೋ ಇಲ್ಲವೋ ಅದು ಸಂಶಯವಾಗಿದೆ, ನಾನವನನ್ನು ನೋಡಬೇಕೆಂದು ಇಷ್ಟಪಡುವುದಿಲ್ಲ, ನಾನೀಗ ಬೇರೊಬ್ಬನ ಹೆಂಡತಿಯಾಗಿದೇನೆ, ಆದರೆ ನನ್ನ ಬಾಲ್ಯಕಾಲದ ಸ್ನೇಹಿತನು ಬದುಕಿರಲೆಂದು ನಾನೇಕೆ ಹರಸಕೂಡದು?" ಎಂದು ಯೋಚಿಸಿದಳು.

ಧನದಾಸನು ಕಾರಣಾಂತರಗಳಿಂದ ಚಿಂತಾಕ್ರಾಂತನಾಗುತ ಬಂದನು. ದಿನಕ್ರಮೇಣ ಚಿಂತೆಯು ಹೆಚ್ಚಾಗುತ್ತ ಬಂದು ಕಡೆಗೆ ದಾರುಣವಾದ ರೋಗದಲ್ಲಿ ಬಿದ್ದನು. ಸ್ವಲ್ಪಕಾಲದಲ್ಲಿಯೇ ಅವನಿಗೆ ಮೃತ್ಯುವೂ ಸಂಭವಿಸಿತು; ಧನದಾಸನ ಹೆಂಡತಿಯೂ ಗಂಡನ ಚಿತಿಯಲ್ಲಿ ಅನುಮೃತೆಯಾದಳು. ಹಿರಣ್ಮಯಿಗೆ ಮತ್ತಾರೂ ಇರಲಿಲ್ಲ. ಅವಳು ಬಹುವಿಧವಾಗಿ ತಾಯಿಯ ಕಾಲುಗಳನ್ನು ಹಿಡಿದುಕೊಂಡು ಅಳುತ್ತ ಈಗಲೇ ಸಾಯ್ವೆನೆಂದು ಬೇಡಿಕೊಂಡಳು ; ಆದರೆ ಶ್ರೇಷ್ಠಿಯ ಪತ್ನಿಯು ಕೇಳಲಿಲ್ಲ. ಹಿರಣ್ಮಯಿಯು ಪೃಥ್ವಿಯಲ್ಲಿ ಏಕಾಂಗಿಯಾಗಿ ಉಳಿದುಕೊಂಡಳು.

ಸಹಮರಣದ ಕಾಲದಲ್ಲಿ ಹಿರಣ್ಮಯಿಯ ತಾಯಿಯು ಮಗಳನ್ನು ಕುರಿತು, " ಮಗು ! ನೀನೇಕೆ ಯೋಚಿಸುತ್ತಿ ? ನಿನಗೇನೋ ಒಬ್ಬ ಗಂಡ

ಸಿರುವನು ; ಕ್ಲಿಷ್ಟವಾದ ಕಾಲಾನಂತರ ಅವನನ್ನು ನೀನು ನೋಡಿದರೂ ನೋಡಬಹುದು ; ಹಾಗೆ ನೋಡದೆಹೋದರೆ, ನೀನೀಗ ಬಾಲೆಯಲ್ಲ, ಈ ಪ್ರಪಂಚದಲ್ಲಿ ಮುಖ್ಯವಾದ ಸಹಕಾರಿಯೆಂದು ಹೇಳುವ ಧನವೆಂಬುದು ನಿನಗೆ ಅತುಲವಾಗಿದೆ ; ಯೋಚನೆಯಂ ಮಾಡಬೇಡ" ವೆಂದು ಹೇಳಿದಳು.

ತದರೆ ಆ ಆಶೆಯು ವಿಫಲವಾಗಿ ಹೋಯಿತು. ಧನದಾಸನ ಮರಣಾನಂತರ ನೋಡಲಾಗಿ, ಅವನೇನೂ ಹೆಚ್ಚು ಧನವನ್ನಿಟ್ಟುಹೋಗಿರಲಿಲ್ಲ. ಒಂದು ದೊಡ್ಡಮನೆ, ಸಂಸಾರದ ಸಾಮಗ್ರಿಗಳು, ಕೆಲವು ಆಭರಣಗಳು ಇವು ಹೊರತು ಮತ್ತೇನೂ ಇರಲಿಲ್ಲ. ಹಿರಣ್ಮಯಿಯು ವಿಚಾರಮಾಡಿದುದರಲ್ಲಿ, ಧನದಾಸನ ವ್ಯಾಪಾರದಲ್ಲಿ ಕೆಲವು ವರ್ಷಗಳಿಂದ ನಷ್ಟವೇ ಉಂಟಾಗಿ ಅದನ್ನಾರಿಗೂ ತಿಳಿಸದೆ, ಅದರಿಂದುಂಟಾದ ಸಾಲಗಳನ್ನು ತೀರಿಸುವ ಪ್ರಯತ್ನವಂ ಮಾಡುತಿದ್ದನು ; ಅದೇ ಅವನಿಗೆ ಚಿಂತೆಯನ್ನುಂಟುಮಾಡುವುದಕ್ಕೆ ಕಾರಣವಾಯಿತು ; ಸಾಲವನ್ನು ಹರಿಸುವುದು ಅಸಾಧ್ಯವಾಗಿ ಚಿಂತೆಯು ಹೆಚ್ಚಾಗುತಬಂದು ಕಡೆಗೆ ಅವನ ಮರಣಕ್ಕೂ ಅದೇ ಕಾರಣವಾಯಿತೆಂದು ತಿಳಿಯಬಂತು.

ಧನದಾಸನ ಮರಣದ ಸಮಾಚಾರವು ಮಿಕ್ಕ ಶ್ರೇಷ್ಠಿಗಳಿಗೆ ತಿಳಿಯಿತು ; ಅವರು ಹಿರಣ್ಮಯಿಯ ಬಳಿ ಬಂದು, "ನಿಮ್ಮ ತಂದೆಯು ನಮಗೆ ಸಾಲಗಾರನಾಗಿ ಸತ್ತುಹೋಗಿದ್ದಾನೆ, ನಮ್ಮ ಸಾಲಗಳನ್ನು ಹರಿಸಬೇಕು" ಎಂದು ಕೇಳಿದರು. ಹಿರಣ್ಮಯಿಯು ವಿಚಾರಮಾಡಿದಳು ; ಅವರ ಮಾತು ನಿಜವಾದುದೆಂದು ತಿಳಿಯಬಂತು. ಆಗವಳು ಸರ್ವಸ್ವವನ್ನೂ ವಿಕ್ರಯಿಸಿ ತಂದೆಯ ಸಾಲಗಳನ್ನೆಲ್ಲ ಹರಿಸಿದಳು. ವಾಸಗ್ರಹವೂ ಮಾರಿಹೋಯಿತು.

ಅನಂತರ ಹಿರಣ್ಮಯಿಯು ಅನ್ನವಸ್ತ್ರಕ್ಕೆ ಮಾರ್ಗವಿಲ್ಲದೆ ಪಟ್ಟಣದ ಹೊರಗೆ ಒಂದು ಕುಟೀರದಲ್ಲಿ ಒಬ್ಬಳೇ ವಾಸಮಾಡಿಕೊಂಡಿದ್ದಳು. ಅವಳಿಗೆ ಪರಮ ಸಹಕಾರಿಯಾದವನು ಆನಂದಸ್ವಾಮಿ ; ಅವನು ದೂರದೇಶದಲ್ಲಿದ್ದನು. ಅವನಿದ್ದಲ್ಲಿಗೆ ಅವಳನ್ನು ಕರೆದುಕೊಂಡು ಹೋಗುವರಾರೂ ಇಲ್ಲ.

# ಐದನೆಯ ಪರಿಚ್ಛೇದ.

ಹಿರಣ್ಮಯಿಯು ಯುವತಿಯೂ ಸುಂದರಿಯೂ ಆಗಿದ್ದಳು. ಒಂದು ಮನೆಯಲ್ಲೊಬ್ಬಳೇ ಮಲಗುವುದು ಸರಿಯಾಗಿರಲಿಲ್ಲ. ಅದರಿಂದ ಅಪಾಯ ವುಂಟು, ಕಳಂಕಕ್ಕೂ ಕಾರಣ. ಅಮಲೆಯೆಂಬೊಬ್ಬ ಹೆಂಗಸು ಅವಳ ನೆರೆ ಮನೆಯಲ್ಲಿ ವಾಸಮಾಡುತಿದ್ದಳು ; ಅವಳು ವಿಧವೆ ; ಅವಳಿಗೊಬ್ಬ ಸಣ್ಣ ಗಂಡುಹುಡುಗ, ನಾಲ್ಕೈದುಹೆಣ್ಣು ಮಕ್ಕಳು. ಅಮಲೆಗೆ ಯೌವನದ ಕಾಲವು ಅತೀತವಾಗಿದ್ದಿತು ; ಸಚ್ಚರಿತ್ರೆಯೆಂದು ಖ್ಯಾತಿಗೊಂಡಿದ್ದಳು. ಹಿರಣ್ಮಯಿ ಯು ರಾತ್ರಿಯ ಕಾಲದಲ್ಲಿ ಹೋಗಿ ಅವಳ ಮನೆಯಲ್ಲಿ ಮಲಗುತ್ತಿದ್ದಳು.

ಒಂದುದಿನ ಹಿರಣ್ಮಯಿಯು ಅಮಲೆಯ ಮನೆಯಲ್ಲಿ ಮಲಗುವು ದಕ್ಕೆ ಹೋದಬಳಿಕ ಪ್ರಸ್ತಾವದಮೇಲೆ ಅಮಲೆಯು, "ಪುರಂದರಶ್ರೇಷ್ಠಿ ಯು ಊರು ಬಿಟ್ಟು ಹೋಗಿ ಎಂಟು ವರ್ಷಗಳಾದ ಬಳಿಕ ಪುನಃ ಬಂದಿದ್ದ ನೆಂದು ಊರಲ್ಲಿ ಸುದ್ದಿಯು ಹುಟ್ಟಿದೆ" ಎಂದಳು. ಅದನ್ನು ಕೇಳಿ ಹಿರಣ್ಮ ಯಿಗೆ ಕಣ್ಣೀರು ತುಂಬಿ ಹರಿದುಹೋಯಿತು. ಅಮಲೆಗದು ಕಾಣಲಿಲ್ಲ. ಈ ಪೃಥ್ವಿಯಲ್ಲಿ ಅವಳಿಗೆ ಉಳಿದಿದ್ದೊಂದುಕಡೆಯ ಸಂಬಂಧವೂ ನಿವೃತ್ತಿಯಾಗಿ ಹೋಯಿತು ; ಪುರಂದರನು ಅವಳನ್ನು ಮರೆತುಬಿಟ್ಟನು ; ಮರೆಯದೆ ಅವ ನವಳನ್ನು ಜ್ಞಾಪಕದಲ್ಲಿಟ್ಟಿದ್ದರೆ, ಹಿಂದಿರುಗಿ ಬರುತಿರಲಿಲ್ಲ ; ಪುರಂದರನು ಈಗವಳನ್ನು ಮರೆತಿದ್ದರೆ ನಷ್ಟವೆಷ್ಟೋ ಜ್ಞಾಪಿಸಿಕೊಂಡಿದ್ದರೆ ಲಾಭವೂ ಅಷ್ಟೆ; ಅವಳಿಗೇನು ಪ್ರಯೋಜನ! ಆದರೆ ಆರ ಬಾಲ್ಯಸ್ನೇಹವನ್ನು ಸದಾ ಮನಸ್ಸಿನಲ್ಲಿಟ್ಟುಕೊಂಡು ಜ್ಞಾಪಿಸಿಕೊಳ್ಳುತ್ತ ಯಾವಜ್ಜೀವವೂ ಕಾಲಹರ ಣೆಯನ್ನುಮಾಡುತಿದ್ದಳೋ ಅಂಥವನು ಮರೆತನೆಂದು ಭಾವಿಸಿ ಹಿರಣ್ಮಯಿಗೆ ಮನಸ್ಸಿನಲ್ಲಿ ವ್ಯಥೆಯುಂಟಾಯಿತು. ಹಿರಣ್ಮಯಿಯು, ಮನಸ್ಸಿನಲ್ಲಿ "ಅವನು ಮರೆತಿರನು, ನನಗೋಸ್ಕರ ಅವನೆಷ್ಟುದಿನ ವಿದೇಶದಲ್ಲಿರಲಾಪನು ? ಅದ ಲ್ಲದೆ ಅವನ ತಂದೆಯೂ ಹೋಗಿದ್ದನು; ಊರಿಗೆಬಾರದೆ ಮತ್ತೆಲ್ಲಿಗೆ ಹೋ ಗುವನು ? " ಎಂದು ಯೋಚಿಸಿಕೊಳ್ಳುವಳು. ಪುನಃ, "ನಾನು ವ್ಯಭಿಚಾರಿ ಣಿಯ ದೋಷಕ್ಕೆ ಗುರಿಯಾದೆನು; ಹಾಗಿಲ್ಲದಿದ್ದರೆ, ಪುರಂದರನ ಸ್ಮರಣೆಯು ಪದೇಪದೆ ಬರಲೇಕೆ? " ಎಂದು ತನಗೆ ತಾನೇ ತಿರಸ್ಕರಿಸಿಕೊಳ್ಳುವಳು,

ಅಮಲೆ—ಪುರಂದರನೆಂಬುವನು ನಿನಗೆ ಜ್ಞಾಪಕಕ್ಕೆ ಬರಲಿಲ್ಲವೆ? ಪುರಂದರನು ಈಗ್ಗೆ ಕೆಲವು ತಿಂಗಳಿಗೆ ಮುಂಚೆ ಕಾಲವಾದ ಶಚೀಸೂತಶೆಟ್ಟಿಯ ಮಗನಲ್ಲವೆ?

ಹಿರಣ್ಮಯಿ—ಬಲ್ಲೆನು.

ಅಮಲೆ—ಅವನೇ ಈಗ ಹಿಂದಿರುಗಿ ಬಂದಿರುವನು-ಎಷ್ಟೋ ಹಡಗಿನಮೇಲೆ ಎಷ್ಟೋ ದ್ರವ್ಯವನ್ನು ಸಂಪಾದಿಸಿಕೊಂಡು ಬಂದಿದ್ದಾನಂತೆ, ಅದನ್ನು ಲೆಕ್ಕಮಾಡುವುದಕ್ಕೆ ಆಗುವುದಿಲ್ಲವಂತೆ, ಅಷ್ಟು ಹಣವನ್ನು ನಮ್ಮ ತಾಮುಲಿಪಿನಗರದಲ್ಲಿ ಆವಾಗಲೂ ಆರೂ ಕಂಡಿಲ್ಲವಂತೆ!

ಹಿರಣ್ಮಯಿಯ ದೇಹದಲ್ಲಿ ರಕ್ತದ ವೇಗವು ಹೆಚ್ಚಾಯಿತು. ತನ್ನ ದಾರಿದ್ರ್ಯದ ದೆಸೆಯು ಮನದಲ್ಲಿ ಬಂತು; ತನ್ನ ಪೂರ್ವಸ್ಥಿತಿಯೂ ಜ್ಞಾಪಕಕ್ಕೆ ಬಂತು; ದಾರಿದ್ರ್ಯದ ಜ್ವಾಲೆಯು ಅತಿಮಹತ್ತಾದ ಜ್ವಾಲೆ-ಅವರ ಜ್ವಾಲೆಗೆ ಅತುಲವಾದಾ ಧನರಾಶಿಯು ಅವಳದಾದರೆ ಎಷ್ಟೋ ವಾತಿ-ಆಗ ಕೂಡದೆ? ಹೀಗೆ ಯೋಚಿಸಿಕೊಂಡರೆ ರಕ್ತದ ವೇಗವು ಅರಿಗೆ ಹೆಚ್ಚಾಗದಿರುವುದು? ಹಾಗೆ ಹೆಚ್ಚಾಗದಿರುವುದು ಹೆಂಗಸರಲ್ಲಿ ವಿರಳ. ಹಿರಣ್ಮಯಿಯು ಕೆಲವು ನಿಮಿಷಗಳತನಕ ಮರೆತವಳಂತಿದ್ದು ಬಳಿಕ ಬೇರೆ ಪ್ರಸ್ತಾವವನ್ನೆತ್ತಿದಳು. ಕಡೆಗೆ ನಿದ್ರೆಯು ಬರುವ ಸಮಯದಲ್ಲಿ, "ಅಮಲೆ! ಆ ಶೆಟ್ಟಿಯ ಮಗನು ಮದುವೆಯಾಗಿರುವನೆ?" ಎಂದು ಕೇಳಿದಳು. ಅಮಲೆಯು, "ಇಲ್ಲ, ಇನ್ನೂ ಮದುವೆಯಿಲ್ಲವಂತೆ" ಎಂದಳು.

ಹಿರಣ್ಮಯಿಯ ಇಂದ್ರಿಯಗಳೆಲ್ಲಾ ವಿವಶವಾದುವು, ಆ ರಾತ್ರಿ ಮತ್ತಾವ ಮಾತು ಕಥೆಯು ನಡೆಯಲಿಲ್ಲ.

## ಆರನೆಯ ಪರಿಚ್ಛೇದ

ಅನಂತರ ಒಂದುದಿನ ಅಮಲೆಯು ಹಸನ್ಮುಖಿಯಾಗಿ ಹಿರಣ್ಮಯಿಯ ಬಳಿ ಬಂದು ಮೃದುವಾದ ಭರ್ತ್ಸನೆಯಿಂದ "ಏನೆ, ಹುಡುಗಿ! ಅಂಥಾ ಧರ್ಮವುಳ್ಳವಳೆ, ನೀನು? ಅಂಥಾ ಕೆಲಸವನ್ನು ಮಾಡುವುದುಂಟೇನೆ?" ಎಂದಳು.

ಹಿರಣ್ಮಯಿ—ನಾನೇನನ್ನು ಮಾಡಿದೆನು ?

ಅಮಲೆ—ಇಷ್ಟು ದಿನವಾದರೂ ನನಗೆ ಹೇಳಬೇಡವೆ ?

ಹಿರಣ್ಮಯಿ—ನಾನಾವದನ್ನು ಹೇಳಲಿಲ್ಲ ?

ಅಮಲೆ—ಪುರಂದರಶೆಟ್ಟಿಗೂ ನಿನಗೂ ಅಷ್ಟೊಂದು ಸ್ನೇಹವೆ ?

ಹಿರಣ್ಮಯಿಯು ಸ್ವಲ್ಪ ಲಜ್ಜಿತೆಯಾಗಿ, "ನಾವಿಬ್ಬರೂ ಚಿಕ್ಕವರಾಗಿದ್ದಾಗ ಅವನು ನಮ್ಮ ನೆರೆಯುವನಾಗಿದ್ದನು; ಅದನ್ನು ಕುರಿತು ಹೇಳಲೆ ?" ಎಂದಳು.

ಅಮಲೆ-ಬರಿ ನೆರೆಯುವನಾಗಿದ್ದನೆ ? ನೋಡು, ಏನನ್ನು ತಂದಿದ್ದೇನೆ?

ಹೀಗೆಂದು ಹೇಳಿ ಅಮಲೆಯು ಒಂದು ಭರಣಿಯನ್ನು ತೆಗೆದು ಬಹಳ ಅಪೂರ್ವವಾದ ಮಹಾಪ್ರಕಾಶಗೊಂಡಿದ್ದು ಅತ್ಯಂತ ಬೆಲೆಯುಳ್ಳೊಂದು ವಜ್ರದ ಹಾರವನ್ನು ಹಿರಣ್ಮಯಿಗೆ ತೋರಿಸಿದಳು. ಶೆಟ್ಟಿಯ ಮಗಳಿಗೆ ವಜ್ರದ ಬೆಲೆಯು ಚೆನ್ನಾಗಿ ಗೊತ್ತು. ನೋಡಿ ವಿಸ್ಮಿತೆಯಾಗಿ, "ಇದು ಬಹಳ ಬೆಲೆಯುಳ್ಳುದುದು : ಅದನ್ನೆಲ್ಲಿಂದ ತಂದೆ" ಎಂದಳು.

ಅಮಲೆ—ಅದನ್ನು ಪುರಂದರನು ನಿನಗೆಂದು ಕಳುಹಿದ್ದಾನೆ. ನೀನೆನ್ನ ಮನೆಯಲ್ಲಿರುವುದನ್ನು ಕೇಳಿ ನನ್ನನ್ನು ಕರೆಯಿಸಿ ನಿನಗದನ್ನು ಕೊಡೆಂದು ಹೇಳಿ ಕೊಟ್ಟಿದ್ದಾನೆ.

ಹಿರಣ್ಮಯಿಯು ನೋಡಿ, ಅದನ್ನು ತೆಗೆದುಕೊಂಡರೆ ಯಾವಜ್ಜೀವವೂ ತನ್ನ ದಾರಿದ್ರ್ಯವು ತೊಲಗುವುದೆಂದು ತಿಳಿದಳು. ಧನದಾಸನ ಆದರದಿಂದ ಬೆಳದ ಮಗಳು ಅನ್ನವಸ್ತ್ರಕ್ಕೆ ಕಷ್ಟಪಡುತ್ತ, ಆ ಕಷ್ಟವು ಕೊನೆಗಾಣುವುದಕ್ಕೆ ಅವಕಾಶವೊದಗಿದ್ದರೂ, ಕ್ಷಣೈಕ ವಿಮನೆಯಾಗಿದ್ದು ಕಡೆಗೆ ನಿಟ್ಟೂರ್ಪನ್ನು ಬಿಟ್ಟು, "ಅಮಲೆ ! ಆ ವರ್ತಕರಿಗೆ ನಾನದನ್ನು ತೆಗೆದುಕೊಳ್ಳಲೊಪ್ಪಲಿಲ್ಲವೆಂದು ಹೇಳು" ಎಂದಳು.

ಅಮಲೆಯು ಆಶ್ಚರ್ಯಪಟ್ಟು, "ನಿನಗೇನು ಹುಚ್ಚೆ ? ಇಲ್ಲವಾದರೆ ನಾನು ಹೇಳುವ ಮಾತಿನಲ್ಲಿ ನಂಬುಗೆಯಿಲ್ಲವೊ ?" ಎಂದು ಕೇಳಿದಳು.

ಹಿರಣ್ಮಯಿ—ನೀನು ಹೇಳುವುದನ್ನು ನಂಬುತ್ತೇನೆ. ನಾನು ಹುಚ್ಚಿಯಲ್ಲ; ನಾನದನ್ನು ತೆಗೆದುಕೊಳ್ಳುವುದಿಲ್ಲ,

ಅಮಲೆಯು ಬಹಳ ಬೇಸರಗೊಂಡು ಹೇಳಿದಳು; ಆದರೂ ಹಿರಣ್ಮಯಿಯು ಅದನ್ನು ತೆಗೆದುಕೊಳ್ಳಲಿಲ್ಲ. ಬಳಿಕ ಅಮಲೆಯು ಹಾರವನ್ನು ಕೊಂಡೊಯ್ದು ರಾಜನಾದ ಮದನದೇವನ ಬಳಿ ಹೋಗಿ ಪ್ರಣಾಮವನ್ನು ಮಾಡಿ ಅವನಿಗದನ್ನು ಉಪಹಾರವಾಗಿ ಒಪ್ಪಿಸಿ, "ತಾವು ಅದನ್ನು ದಯವಿಟ್ಟು ಗ್ರಹಣಮಾಡಬೇಕು. ಅದು ತಮಗೆ ಯೋಗ್ಯವಾದುದು" ಎಂದು ಬಿನ್ನೈಸಿದಳು. ರಾಜನು ಹಾರವನ್ನಂಗೀಕರಿಸಿ, ಅಮಲೆಗೆ ಯಥೇಷ್ಟ ದ್ರವ್ಯವನ್ನು ಕೊಟ್ಟನು. ಹಿರಣ್ಮಯಿಗೆ ಅದಾವದೂ ಗೊತ್ತಿರಲಿಲ್ಲ.

ಇದಾದ ಕೆಲವು ದಿನಗಳಾದ ಬಳಿಕ ಪುರಂದರನ ಪರಿಚಾರಿಕೆಯಲ್ಲೊಬ್ಬಳು ಹಿರಣ್ಮಯಿಯ ಬಳಿ ಬಂದು, "ನೀವು ಪರ್ಣಕುಟೀರದಲ್ಲಿರುವುದನ್ನು ಕೇಳಿ ನಮ್ಮ ಯಜಮಾನರಿಗೆ ಬಹಳ ಸಂಕಟವಾಯಿತು, ತಾವು ಅವರ ಬಾಲ್ಯಸ್ನೇಹಿತರು. ಅವರ ಮನೆಯೇ ತಮ್ಮ ಮನೆಯಾಗಿದೆ, ಆದರೂ ತಾವು ಅಲ್ಲಿ ಬಂದಿರಬೇಕೆಂದು ಕೇಳುವುದಿಲ್ಲ, ಅವರು ನಿಮ್ಮ ತಂದೆಗಳ ಮನೆಯನ್ನು ಸಾಲಗಾರರಿಂದ ಬೆಲೆಗೆ ಪುನಃ ಪಡೆದುಕೊಂಡಿದ್ದಾರೆ, ಅದನ್ನು ನಿಮಗೆ ದಾನವಾಗಿ ಕೊಟ್ಟಿದ್ದಾರೆ, ಆದುದರಿಂದ ನೀವು ಹೋಗಿ ಅಲ್ಲಿ ವಾಸವಾಗಿರಲು ಪ್ರಾರ್ಥಿಸಿದೆನೆಂದು ತಮಗೆ ತಿಳಿಸುವಂತೆ ಹೇಳಿ ಕಳುಹಿಸಿದ್ದಾರೆ" ಎಂದಳು,

ಹಿರಣ್ಮಯಿಗೆ ದಾರಿದ್ರ್ಯದ ದುಃಖಕ್ಕಿಂತ ತಂದೆಯ ಮನೆಯನ್ನು ಬಿಟ್ಟು ಬಂದುದು ಹೆಚ್ಚು ದುಃಖಕರವಾಗಿದ್ದಿತು. ಬಾಲ್ಯದಲ್ಲೆಲ್ಲಿ ಆಡುತ್ತಿದ್ದಳೋ, ತಾಯಿತಂದೆಗಳೊಂದಿಗೆಲ್ಲಿ ವಾಸವಾಗಿದ್ದಳೋ, ತನ್ನ ತಾಯಿತಂದೆಗಳೆಲ್ಲಿ ಕಾಲವಾದರೋ, ಅಲ್ಲಿ ಪುನಃ ಅವಳಾಗಿನ ಸ್ಥಿತಿಯಲ್ಲಿ ಹೋಗಿ ವಾಸಮಾಡುವುದು ಹೆಚ್ಚು ಕಷ್ಟವಾದುದಾಗಿ ಬೋಧೆಯಾಯಿತು. ಆ ಮನೆಯ ಮಾತು ಕೇಳುತಲೇ ಅವಳ ಕಣ್ಣುಗಳಲ್ಲಿ ನೀರು ತುಂಬಿ ತಟತಟ ಸುರಿಯಿತು. ಅವಳು ಪರಿಚಾರಿಕೆಗೆ ಆಶೀರ್ವಾದವಂ ಮಾಡಿ, "ನಾನಾ ದಾನವನ್ನು ಗ್ರಹಣಮಾಡುವುದುಚಿತವಲ್ಲ; ಆದರೆ ಆಶೆಯನ್ನಣಗಿಸಲಾರೆನು, ನಿಮ್ಮ ಪ್ರಭುವಿಗೆ ಸರ್ವಪ್ರಕಾರವಾದ ಮಂಗಳತರಂಗಗಳುಂಟಾಗುವಂತೆ ಹರಸಿದೆನೆಂದು ಹೇಳು" ಎಂದಳು.

ಪರಿಚಾರಿಕೆಯು ಪ್ರಣಾಮವನ್ನು ಮಾಡಿ ಬೀಳ್ಗೊಂಡು ಹೊರಟು ಹೋದಳು, ಆಗಲ್ಲಿ ಅಮಲೆಯು ಕುಳಿತಿದ್ದಳು. ಹಿರಣ್ಮಯಿಯು ಅವಳನ್ನು

ಕುರಿತು, "ಅಮಲೆ! ನಾನೊಬ್ಬಳೇ ಹೋಗಿ ಆ ಮನೆಯಲ್ಲಿ ವಾಸಮಾಡ ಲಾರೆನು, ನೀನೂ ಅಲ್ಲಿಗೆ ಬಂದಿರಬೇಕು" ಎಂದಳು.

ಅಮಲೆಯು ಒಪ್ಪಿಕೊಂಡಳು. ಇಬ್ಬರೂ ಹೋಗಿ ಧನದಾಸನ ಮನೆಯಲ್ಲಿ ವಾಸಮಾಡಿಕೊಂಡಿದ್ದರು, ಆದರೂ ಆಗಾಗ್ಗೆ ಅಮಲೆಯು ಪುರಂದರನ ಮನೆಗೆ ಹೋಗುತ್ತಿದ್ದುದನ್ನು ಹಿರಣ್ಮಯಿಯು ತಿಳಿದು, ಹಾಗೆ ಹೋಗಕೂಡದೆಂದು ನಿಷೇಧಿಸಿದಳು. ಅಮಲೆಯು ಹೋಗುವುದನ್ನು ಬಿಟ್ಟಳು.

ತಂದೆಯು ಮನೆಗೆ ಬಂದಾರಭ್ಯ ಅವಳಿಗೊಂದು ವಿಷಯವನ್ನು ಕುರಿತು ಆಶ್ಚರ್ಯವುಂಟಾಯಿತು. ಒಂದುದಿನ ಅಮಲೆಯು, "ಹಿರಣ್ಮಯಿ! ನೀನು ಸಂಸಾರನಿರ್ವಾಹಕ್ಕೋಸ್ಕರವಾಗಿ ಯೋಚಿಸಕೆಲಸವಿಲ್ಲ, ನೀನು ಸ್ವಂತವಾಗಿ ಕಷ್ಟಪಡಬೇಕಾದ ಆವಶ್ಯಕವೂ ಇಲ್ಲ, ಅರಮನೆಯಲ್ಲೀನಗೆ ಕೆಲಸವಾಗಿದೆ, ದುಡ್ಡುಕಾಸಿಗೆ ಕಡಿಮೆಯಿಲ್ಲ, ನೀನು ಮನೆಯಲ್ಲಿ ಯಜ ಮಾನಿಯಾಗಿದ್ದುಕೊಂಡಿರು" ಎಂದು ಹೇಳಿದಳು. ಅಮಲೆಯ ಕೈಯಲ್ಲಿ ಹೆಚ್ಚು ಹಣಕಾಸು ಬಂದು ಹೋಗುತಿದ್ದುದನ್ನು ನೋಡಿ ಹಿರಣ್ಮಯಿಗೆ ಆಶ್ಚರ್ಯವುಂಟಾಗಿ ಮನದಲ್ಲಿ ನಾನಾಪ್ರಕಾರವಾದ ಸಂಶಯವು ತಲೆದೋ ರಿತು.

## ಏಳನೆಯ ಪರಿಚ್ಛೇದ.

ವಿವಾಹವಾದ ವರ್ಷದಿಂದ ಐದನೆಯ ವಾಘಶುದ್ಧ ಪಂಚಮಿಯು ಪ್ರಾಪ್ತವಾಯಿತು. ಹಿರಣ್ಮಯಿಯು ಆ ದಿನವನ್ನು ಜ್ಞಾಪಕದಲ್ಲಿಟ್ಟುಕೊಂ ಡಿದ್ದವಳು ಸಂಧ್ಯಾಕಾಲದಲ್ಲಿ, ಏಮನೆಯಾಗಿ ಕುಳಿತಿದ್ದಳು. ಕುಳಿತಿದ್ದ ಹಾಗೆ ಮನಸ್ಸಿನಲ್ಲಿ, "ಗುರುಗಳ ಅನುಜ್ಞೆಯಪ್ರಕಾರ ನಾಳಿನ ದಿನದಿಂದ ನಾನು ಉಂಗುರವನ್ನು ಹಾಕಿಕೊಳ್ಳಬಹುದು. ಆದರೆ ಹಾಕಿಕೊಳ್ಳಲಾ ಪೆನೆ? ಹಾಕಿಕೊಂಡರೆ ನನಗೇನು ಲಾಭ? ಬಹುಶಃ ಸ್ವಾಮಿಯನ್ನು ಕಂ

ಹೆರೂ ಕಾಣಬಹುದು ; ಆದರೆ ಸ್ವಾಮಿಯನ್ನು ಸೇರುವುದೆನಗಿಷ್ಟವಿಲ್ಲ— ಅಥವಾ ಚಿರಕಾಲವೂ ಅನ್ಯಪುರುಷನ ಮೂರ್ತಿಯನ್ನೇಕೆ ಮನಸ್ಸಿನಲ್ಲಿ ಅಂಕಿತಮಾಡಿಟ್ಟುಕೊಂಡಿರಲಿ ? ದುರಂತವಾದೆನ್ನ ಮನವನ್ನು ಶಾಸನ ಮಾಡುವುದು ಒಳ್ಳೆಯದು, ಹಾಗೆ ಶಾಸನಮಾಡದಿದ್ದರೆ ಧರ್ಮವನ್ನು ಬಿಟ್ಟು ಪತಿತೆಯಾಗಿ ಹೋಗುವೆನು " ಎಂದು ಭಾವಿಸಿಕೊಂಡಳು.

ಆ ಸಮಯದಲ್ಲಿ ಅಮಲೆಯು ವಿಸ್ಮಯವಿಹ್ವಲೆಯಾಗಿ ಬಂದು "ಏನೋ ಮಹದ್ವಿಪತ್ತು ಬಂದಹಾಗಿದೆ! ಏನೂ ಗೊತ್ತಾಗುವುದಿಲ್ಲ ! ಏನಾದೀತೊ ! ಹೇಳುವುದಕ್ಕಾಗುವುದಿಲ್ಲ " ವೆಂದು ಭಯಗೊಂಡು ಹೇಳಿ ದಳು.

ಹಿರಣ್ಮಯಿ—ಏನಾಯಿತು ?

ಅಮಲೆ—ರಾಜರ ಅರಮನೆಯಿಂದ ನಿನಗೆಸಲವಾಗಿ ಪಲ್ಲಕ್ಕಿ, ದಾಸ ದಾಸಿಯರು ಬಂದಿದ್ದಾರೆ—ನಿನ್ನನ್ನು ಕರೆದುಕೊಂಡು ಹೋಗುವರಂತೆ.

ಹಿರಣ್ಮಯಿ—ನಿನಗೆ ಹುಚ್ಚು ಹಿಡಿಯಿತು. ನನ್ನನ್ನು ಅರಮನೆಗೇಕೆ ಕರೆದುಕೊಂಡು ಹೋಗುವರು ?

ಹೀಗೆ ಮಾತಾಡುತಿರುವಾಗ, ರಾಜದೂತಿಯು ಬಂದು ಪ್ರಣಾಮ ವನ್ನು ಮಾಡಿ, "ರಾಜಾಧಿರಾಜ ಪರಮ ಭಟ್ಟಾರಕ ಶ್ರೀ ಮದನದೇವನು ಹಿರಣ್ಮಯಿಯನ್ನು ಈ ನಿಮಿಷದಲ್ಲಿ ಪಲ್ಲಕ್ಕಿಯಲ್ಲಿ ಕುಳ್ಳಿರಿಸಿ ಅರಮನೆಗೆ ಕರತರಬೇಕೆಂದು ಆಜ್ಞಾಪಿಸಿರುವನು " ಎಂದಳು.

ಹಿರಣ್ಮಯಿಯು ಆಶ್ಚರ್ಯಪಟ್ಟಳು ; ಆದರೆ ಬರುವುದಿಲ್ಲವೆಂದು ಹೇಳು ವುದಕ್ಕೆ ಆಗದು ; ರಾಜಾಜ್ಞೆಯು ಅಲಂಘ್ಯವಾದುದು. ಅದಲ್ಲದೆ ರಾಜಾ ಮದನ ದೇವನ ಅರಮನೆಗೆ ಹೋಗಲಾವ ಶಂಕೆಯೂ ಇಲ್ಲ; ಆತನು ಪರಮ ಧಾರ್ಮಿಕನೆಂತಲೂ ಜಿತೇಂದ್ರಿಯನೆಂತಲೂ ಖ್ಯಾತನಾಗಿದ್ದಾನೆ ; ಅವನ ಪ್ರತಾಪದಿಂದಾವ ರಾಜಪುರುಷನಿಗಾಗಲಿ, ಹೆಂಗಸರಮೇಲೆ ಅತ್ಯಾ ಚಾರವನ್ನು ನಡೆಯಿಸಲು ಧೈರ್ಯವಿರದು.

ಹಿರಣ್ಮಯಿಯು ಅಮಲೆಯನ್ನು ಕುರಿತು, "ಅಮಲೆ ! ನಾನು ರಾಜ ಸಂದರ್ಶನಕ್ಕೆ ಹೋಗಲು ಸಿದ್ಧವಾಗಿದ್ದೇನೆ, ನೀನೂ ಸಂಗಡ ಬಾ" ಎಂದಳು. ಅಮಲೆಯು ಒಪ್ಪಿಕೊಂಡಳು.

ಅಮಲೆಯನ್ನು ಸಂಗಡ ಕರೆದುಕೊಂಡು ಹಿರಣ್ಮಯಿಯು ಪಲ್ಲಕ್ಕಿಯನ್ನು ಹತ್ತಿ ರಾಜಾವರೋಧವನ್ನು ಪ್ರವೇಶಿಸಿದಳು. ಶ್ರೇಷ್ಠಿಯ ಮಗಳು ಬಂದಳೆಂದು ಪ್ರತಿಹಾರಿಗಳು ಹಿರಣ್ಮಯಿಯೊಬ್ಬಳನ್ನೇ ರಾಜನ ಸಮುಖಕ್ಕೆ ಕರೆದುಕೊಂಡು ಹೋದರು. ಅಮಲೆಯು ಹೊರಗೆ ನಿಂತಳು.

## ಎಂಟನೆಯ ಪರಿಚ್ಛೇದ.

ಹಿರಣ್ಮಯಿಯು ರಾಜನನ್ನು ನೋಡಿ ವಿಸ್ಮಿತೆಯಾದಳು. ರಾಜನು ದೀರ್ಘಾಕೃತಿ ಪುರುಷನಾಗಿಯೂ, ಕವಾಟವಕ್ಷನಾಗಿಯೂ, ದೀರ್ಘಹಸ್ತನಾಗಿಯೂ, ಸುಘಟಿತ ಆಕೃತಿಯುಳ್ಳವನಾಗಿಯೂ, ಪ್ರಶಸ್ತ ಲಲಾಟನಾಗಿಯೂ, ವಿಸ್ಫಾರಿತ ಆಯತ ಚಕ್ಷುಗಳುಳ್ಳವನಾಗಿಯೂ, ಶಾಂತಮೂರ್ತಿಯಾಗಿಯೂ ಇದ್ದನು. ಅಂತಹ ಸುಂದರಪುರುಷನು ಹೆಂಗಸರ ದೃಷ್ಟಿಗೆ ಬೀಳುವುದು ಅಪೂರ್ವ. ರಾಜನು ಶ್ರೇಷ್ಠಿಯ ಕನ್ಯೆಯನ್ನು ನೋಡಿ ಅಂತಹ ಸುಂದರಿಯು ತನ್ನ ಅಂತಃಪುರದಲ್ಲಿಯೂ ಇರುವುದು ದುರ್ಲಭವೆಂದು ತಿಳಿದನು.

ರಾಜ—ಹಿರಣ್ಮಯಿಯೆಂಬಾಕೆ ನೀನೇವೆ ?

ಹಿರಣ್ಮಯಿ—ನಾನು ತಮ್ಮ ದಾಸಿ.

ರಾಜ—ನಿನ್ನನ್ನೇಕೆ ಕರೆಯಿಸಿದನೋ ಅದನ್ನು ಕೇಳು. ನಿನ್ನ ವಿವಾಹವಾದ ಸಂಗತಿಯು ನಿನಗೆ ಜ್ಞಾಪಕವುಂಟೆ?

ಹಿರಣ್ಮಯಿ- ಜ್ಞಾಪಕವುಂಟು.

ರಾಜ—ಅಂದು ರಾತ್ರಿ ಆನಂದಸ್ವಾಮಿಯು ನಿನಗೆ ಕೊಟ್ಟುಂಗುರವು ನಿನ್ನಲ್ಲಿದೆಯೆ ?

ಹಿರಣ್ಮಯಿ—ಮಹಾರಾಜನೆ! ಆ ಉಂಗುರವಿದೆ, ಅವೆಲ್ಲಾ ಬಹಳ ಗುಟ್ಟಾದ ಮಾತು, ತಮಗದಾವ ಪ್ರಕಾರವಾಗಿ ತಿಳಿಯಬಂತು ?

ರಾಜನದಕ್ಕೆ ಉತ್ತರವನ್ನು ಕೊಡದೆ, "ಆ ಉಂಗುರವೆಲ್ಲಿದೆ? ನನಗೆ ತೋರು" ಎಂದನು.

ಹಿರಣ್ಮಯಿ—ಅದನ್ನು ಮನೆಯಲ್ಲಿಟ್ಟು ಬಂದಿದ್ದೇನೆ; ಐದು ವರುಷವು ಮುಗಿಯುವುದಕ್ಕೆ ಕೆಲವು ಘಳಿಗೆಗಳು ಉಳಿದವೆ; ಆದುದರಿಂದ ಅದನ್ನು ಧಾರಣೆ ಮಾಡಲು ಆನಂದಸ್ವಾಮಿಯು ಹೇಳಿರುವ ನಿಷೇಧವು ನಿವಾರಣೆಯಾಗಿಲ್ಲ.

ರಾಜ—ಒಳ್ಳೆಯದು, ಆ ಉಂಗುರಕ್ಕೆ ಅನುರೂಪವಾದ ಮತ್ತೊಂದು ಉಂಗುರವನ್ನು ನಿನ್ನ ಸ್ವಾಮಿಗೆ ಆನಂದಸ್ವಾಮಿಯು ಕೊಟ್ಟಿದುದನ್ನು ನೋಡಿದರೆ ಗುರ್ತಿಸಬಲ್ಲೆಯಾ ?

ಹಿರಣ್ಮಯಿ—ಎರಡುಂಗುರಗಳೂ ಸಮಾನವಾದಕಾರಣ ಗುರ್ತಿಸಬಲ್ಲೆನು.

ಆಗ ಪ್ರತಿಹಾರಿಯು ರಾಜಾಜ್ಞಾನುಸಾರವಾಗಿ ಒಂದು ಸುವರ್ಣದ ಭರಣಿಯನ್ನು ತಂದನು. ರಾಜನು ಭರಣಿಯನ್ನು ತೆಗೆದು ಅದರಲ್ಲಿದ್ದ ಒಂದುಂಗುರವನ್ನು ತೆಗೆದು ಹಿರಣ್ಮಯಿಯ ಕೈಯಲ್ಲಿ ಕೊಟ್ಟು, ಆ ಉಂಗುರವು ಆರದು? ನೋಡು " ಎಂದು ಹೇಳಿದನು.

ಹಿರಣ್ಮಯಿಯು ಉಂಗುರವನ್ನು ತೆಗೆದುಕೊಂಡು ದೀಪದ ಬೆಳಕಿನಲ್ಲಿ ನೋಡಿ, " ದೇವ! ಈ ಉಂಗುರವು ನನ್ನ ಸ್ವಾಮಿಯದೇ ಅಹುದು, ಆದರೆ ತಮಗದೆಲ್ಲಿ ಬಂತು ? " ಎಂದು ಕೇಳಿ, ಸ್ವಲ್ಪ ಯೋಚಿಸಿ, ಪುನಃ, " ದೇವ! ಇದರಿಂದ ನಾನು ಪತಿಹೀನೆಯಾಗಿದ್ದೇನೆಂದು ತಿಳಿಯುತ್ತೇನೆ, ಸ್ವಜನ ಹೀನರಾಗಿ ಮೃತರಾದವರ ಧನವು ತಮ್ಮ ಸರಕಾರಕ್ಕೆ ಬರುತ್ತದೆ. ಹಾಗಿಲ್ಲದೆ ಅವನು ಜೀವಿತನಾಗಿದ್ದರೆ ಅದನ್ನವನು ತ್ಯಾಗಮಾಡುವುದು ಅಸಂಭವ " ವೆಂದಳು. ರಾಜನು ನಕ್ಕು, " ನನ್ನ ಮಾತನ್ನು ನಂಬು, ನೀನು ಪತಿಹೀನೆಯಲ್ಲ-ಸುಮಂಗಲಿ " ಎಂದನು.

ಹಿರಣ್ಮಯಿ—ಹಾಗಾದರೆ ನನ್ನ ಸ್ವಾಮಿಯು ನನಗಿಂತ ಹೆಚ್ಚು ದರಿದ್ರನಾಗಿರಬೇಕು : ಧನಲೋಭದಿಂದ ಅದನ್ನು ವಿಕ್ರಯಿಸಿದ್ದಾನೆ.

ರಾಜ—ನಿನ್ನ ಸ್ವಾಮಿಯು ಐಶ್ವರ್ಯವಂತನು.

ಹಿರಣ್ಮಯಿ—ಹಾಗಾದರೆ, ತಾವು ಅವನನ್ನು ಮೋಸಗೊಳಿಸಿ ಅದನ್ನು ಅವನಿಂದ ಅಪಹರಿಸಿರಬೇಕು.

ರಾಜನು ಅಂತಹ ದುಸ್ಸಾಹಸಿಕವಾದ ಮಾತನ್ನು ಕೇಳಿ ವಿಸ್ಮಿತನಾಗಿ, "ನೀನು ಬಹಳ ಸಾಹಸವುಳ್ಳವಳು! ರಾಜಾ ಮದನದೇವನು ಕಳ್ಳನೆಂದು ಮತ್ತಾರೂ ಹೇಳಿಲ್ಲ" ವೆಂದನು.

ಹಿರಣ್ಮಯಿ—ಹಾಗಿಲ್ಲದಿದ್ದರೆ, ತಮಗಾ ಉಂಗುರವೆಲ್ಲಿ ಸಿಕ್ಕಿತು?

ರಾಜ—ನಿನಗೆ ವಿವಾಹವಾದ ರಾತ್ರಿ ಆನಂದಸ್ವಾಮಿಯು ಅದನ್ನು ತಂದು ನನ್ನ ಬೆರಳಿಗೆ ಹಾಕಿದನು.

ಆಗ ಹಿರಣ್ಮಯಿಯು ಲಜ್ಜೆಯಿಂದ ಅಧೋಮುಖಿಯಾಗಿ, "ಆರ್ಯ ಪುತ್ರ! ನನ್ನಪರಾಧವನ್ನು ಕ್ಷಮಿಸಬೇಕು: ನಾನು ಚಪಲೆ; ತಿಳಿಯದೆ ಕಟೂಕ್ತಿಗಳನ್ನು ಹೇಳಿದೆನು" ಎಂದಳು.

## ಒಂಭತ್ತನೆಯ ಪರಿಚ್ಛೇದ.

ಹಿರಣ್ಮಯಿಯು ರಾಜಮಹಿಷಿ! ಅದನ್ನುಕೇಳಿ ಹಿರಣ್ಮಯಿಯು ವಿಸ್ಮಿತೆಯಾದಳು. ಆದರೆ ಸ್ವಲ್ಪವಾದರೂ ಆಹ್ಲಾದಿತೆಯಾಗಲಿಲ್ಲ; ವಿಶೇಷವಾಗಿ,ವಿಷಣ್ಣೆಯಾಗಿ, "ನಾನಿದುವರೆಗೆ ಪುರಂದರನನ್ನು ಪಡೆಯಲಿಲ್ಲವಾದರೂ ಪರಪತ್ನೀತ್ವದ ಸಂಕಟವನ್ನು ಅನುಭವಿಸಲಿಲ್ಲ. ಇಂದುಮೊದಲು, ನನಗಾ ವ್ಯಸನವು ಪ್ರಾರಂಭವಾಯಿತಲ್ಲದೆ, ನಾನು ಮನಸಾ ಪುರಂದರನ ಪತ್ನಿಯಾಗಿ, ಅನನ್ಯಾನುರಾಗಿಣಿಯಾಗಿ ಈ ಮಹತ್ಮನಾದ ರಾಜನ ಗೃಹವನ್ನು ಕಳಂಕಿತವಾಗಿ ಮಾಡುವುದು ಹೇಗೆ?" ಎಂದು ಯೋಚಿಸಿಕೊಂಡಿದ್ದ ಸಮಯದಲ್ಲಿ, ರಾಜನು, "ಹಿರಣ್ಮಯಿ! ನೀನೇನೋ ನನ್ನ ಮಹಿಷಿಯಾದೆ, ಆದರೆ ನಿನ್ನನ್ನು ಪರಿಗ್ರಹಿಸುವುದಕ್ಕೆ ಮುಂಚಿತವಾಗಿ ನಿನ್ನಿಂದ ಕೆಲವು ಅಂಶಗಳನ್ನು ತಿಳಿಯಬೇಕಾಗಿದೆ, ನೀನು ಬೆಲೆಯನ್ನು ಕೊಡದೆ ಪುರಂದರನ ಮನೆಯಲ್ಲಿ ವಾಸ ಮಾಡುವುದು ಹೇಗೆ?" ಎಂದು ಪ್ರಶ್ನೆಯನ್ನು ಮಾಡಿದನು.

ಹಿರಣ್ಮಯಿಯು ಅಧೋವದನೆಯಾದಳು. ರಾಜನು ಪುನಃ, " ನಿನ್ನ ದಾಸಿಯಾದ ಅಮಲೆಯು ಪದೇಪದೇ ಪುರಂದರನ ಮನೆಗೆ ಹೋಗಿ ಬರುವುದೇಕೆ ? " ಎಂದು ಪ್ರಶ್ನೆಮಾಡಿದನು

ಹಿರಣ್ಮಯಿಯು ಮತ್ತೂ ಹೆಚ್ಚು ಲಜ್ಜಾವನತಮುಖಿಯಾಗಿ, "ರಾಜಾ ಮದನದೇವನು ಎಂತಹ ಸರ್ವಜ್ಞನು ! " ಎಂದು ಭಾವಿಸಿದಳು.

ರಾಜನು, " ಮತ್ತೊಂದು ಹೆಚ್ಚಿನ ಮಾತು ಉಂಟು; ನೀನು ಪರನಾರಿಯಾಗಿದ್ದುಕೊಂಡು, ಪುರಂದರನು ಕೊಟ್ಟ ವಜ್ರದ ಹಾರವನ್ನು ತೆಗೆದುಕೊಂಡುದು ಹೇಗೆ ? " ಎಂದು ಪುನಃ ಪ್ರಶ್ನೆಯನ್ನು ಮಾಡಿದನು.

ಹಿರಣ್ಮಯಿಯು ಆಗ ಮಾತಾಡಿದಳು. ಅವಳು, " ಆರ್ಯಪುತ್ರ ! ನೀನು ಸರ್ವಜ್ಞನಲ್ಲವೆಂಬುದು ನನಗೀಗ ಗೊತ್ತಾಯಿತು. ವಜ್ರದ ಹಾರವನ್ನು ನಾನು ಹಿಂದಿರುಗಿ ಕೊಟ್ಟುಬಿಟ್ಟೆನು " ಎಂದಳು.

ರಾಜ-ನೀನಾ ವಜ್ರದ ಹಾರವನ್ನೆನಗೆ ವಿಕ್ರಯಿಸಿದೆ ; ಆ ಹಾರವನ್ನು ನೋಡು.

ಹೀಗೆಂದು ಹೇಳಿ ರಾಜನು ಭರಣಿಯಿಂದ ಹಾರವನ್ನು ತೆಗೆದು ತೋರಿದನು. ಹಿರಣ್ಮಯಿಯು ವಜ್ರದ ಹಾರವನ್ನು ಗುರ್ತಿಸಿ ವಿಸ್ಮಿತೆಯಾಗಿ, " ಆರ್ಯಪುತ್ರ ! ನಾನೇ ಸ್ವಂತವಾಗಿ ನಿನ್ನಬಳಿ ಬಂದು ಆ ಹಾರವನ್ನು ಮಾರಿದೆನೆ ? " ಎಂದು ಕೇಳಿದಳು.

ರಾಜ-ಇಲ್ಲ. ನಿನ್ನ ದಾಸಿ, ಅಥವಾ ದೂತಿಯು ತಂದು ವಿಕ್ರಯಿಸಿದಳು. ಅವಳನ್ನು ಕರೆಯಿಸಲೆ ?

ಹಿರಣ್ಮಯಿಯು, ಕೋಪಗೊಂಡಿದ್ದವಳ ವದನಮಂಡಲವು ನಗುಮುಖವಾಗಿ, " ಆರ್ಯಪುತ್ರ ! ಅಪರಾಧವನ್ನು ಮನ್ನಿಸು, ಅಮಲೆಯನ್ನು ಕರೆಯಿಸಬೇಕಾದುದಿಲ್ಲ: ವಿಕ್ರಯಮಾಡಿದುದನ್ನು ನಾನೊಪ್ಪುವೆನು " ಎಂದಳು.

ಕೇಳಿ ರಾಜನಿಗೆ ಆಶ್ಚರ್ಯವುಂಟಾಗಿ, " ಹೆಂಗಸರ ಚರಿತ್ರೆಯು ಅಭಾವನೀಯವಾದುದು ; ನೀನು ಅನ್ಯನ ಪತ್ನಿಯಾಗಿ ಪುರಂದರನಿಂದ ಹಾರವನ್ನು ತೆಗೆದುಕೊಂಡೇಕೆ ? " ಎಂದನು

ಹಿರಣ್ಮಯಿ ಪ್ರಣಯದ ಉಪಹಾರವೆಂದು ಗ್ರಹಣಮಾಡಿದೆನು.

ರಾಜನು ಮತ್ತಷ್ಟು ಅಚ್ಚರಿಗೊಂಡು, "ಅದು ಹೇಗೆ? ಆದಾವ ವಿಧವಾದ ಪ್ರಣಯೋಪಹಾರ?" ವೆಂದು ಕೇಳಿದನು.

ಹಿರಣ್ಮಯಿ-ನಾನು, ಅಸತಿ-ಮಹಾರಾಜನೆ! ನಾನು ತಮ್ಮ ಗೃಹಣಕ್ಕೆ ಯೋಗ್ಯೆಯಲ್ಲ; ನಾನು ಪ್ರಮಾಣವನ್ನು ಮಾಡುತ್ತೇನೆ, ನನಗೆ ಅಪ್ಪಣೆಯನ್ನು ಕೊಡಬೇಕು, ತಾವು ನನ್ನನ್ನು ವಿವಾಹ ಮಾಡಿಕೊಂಡುದುದನ್ನು ಮರೆತುಬಿಡಿ.

ಹಿರಣ್ಮಯಿಯು ರಾಜನಿಗೆ ಪ್ರಣಾಮವನ್ನು ಮಾಡಿ ಗಮನೋದ್ಯುತೆಯಾದಾಗ, ರಾಜನ ವಿಸ್ಮಯವಿಕಾಶಕ ಮುಖಕಾಂತಿಯು ಒಮ್ಮಿಂದೊಮ್ಮೆ ಪ್ರಫುಲ್ಲವಾಯಿತು. ಅವನು ಘಟ್ಟಿಯಾಗಿ ನಕ್ಕನು. ಹಿರಣ್ಮಯಿಯು ಹಿಂದಿರುಗಿದಳು.

ರಾಜ-ಹಿರಣ್ಮಯಿ! ನೀನೇ ಜಯಿಸಿದೆ, ನಾನು ಸೋತೆನು, ನೀನು ಅಸತಿಯಲ್ಲ; ನಾನು ನಿನ್ನ ಸ್ವಾಮಿಯೂ ಅಲ್ಲ; ಹೋಗಬೇಡ.

ಹಿರಣ್ಮಯಿ-ಮಹಾರಾಜನೆ! ಹಾಗಾದರೆ, ಇದೇನು ಅವಾಂತರ! ನನಗೆ ತಿಳಿಯಹೇಳಬೇಕು. ನಾನು ಅತಿ ಸಾಮಾನ್ಯೆಯಾದ ಹೆಂಗಸು, ನನ್ನ ಸಂಗಡ ತಮ್ಮಂತಹ ಗಂಭೀರಪ್ರಕೃತಿಯುಳ್ಳ ರಾಜಾಧಿರಾಜರ ರಹಸ್ಯವು ಅಸಂಭವ. ರಾಜನಿಗೆ ನಗುವು ನಿಲ್ಲದೆ "ನಮ್ಮಂತಹ ರಾಜರಲ್ಲಿಯೇ ಇಂತಹ ರಹಸ್ಯವು ಸಂಭವವು. ಈಗ್ಗೆ ಆರುವರ್ಷಕ್ಕೆ ಮುಂಚೆ ನಿನ್ನ ಆಭರಣದ ಭರಣಿಯುಳ್ಳಿಂದು ಕಾಗದದ ಚೂರು ನಿನಗೆ ಸಿಕ್ಕಿತಲ್ಲವೆ? ಅದೆಲ್ಲಿದೆ?" ಎಂದನು.

ಹಿರಣ್ಮಯಿ-ಮಹಾರಾಜನೆ! ತಾವು ಸರ್ವಜ್ಞರೇ ಅಹುದು; ಪತ್ರಾರ್ಧವನ್ನು ಮನೆಯಲ್ಲಿಟ್ಟಿದ್ದೇನೆ.

ರಾಜ-ನೀನು ಪಲ್ಲಕ್ಕಿಯಲ್ಲಿ ಪುನಃ ಮನೆಗೆ ಹೋಗಿ ಆ ಪತ್ರಾರ್ಧವನ್ನು ತೆಗೆದುಕೊಂಡು ಬಾ. ನೀನು ಬಂದರೆ ವಿಚಾರವನ್ನೆಲ್ಲಾ ಹೇಳುವೆನು.

# ಹತ್ತನೆಂಟು ಪರಿಚ್ಛೇದ.

ಹಿರಣ್ಮಯಿಯು ರಾಜನ ಆಜ್ಞೆಯನ್ನು ಪಡೆದು ತನ್ನ ಮನೆಗೆ ಬಂದು ಮೊದಲು ಹೇಳಿದ್ದ ಪತ್ರಾರ್ಧವನ್ನು ತೆಗೆದುಕೊಂಡು ಪುನಶ್ಚ ರಾಜಸನ್ನಿಧಾನಕ್ಕೆ ಬಂದಳು. ರಾಜನು ಆ ಪತ್ರಾರ್ಧವನ್ನು ನೋಡಿ ಭರಣಿಯಿಂದದರ ಮತ್ತೊಂದು ಅರ್ಧವನ್ನು ತೆಗೆದು ಹಿರಣ್ಮಯಿಯ ಕೈಯಲ್ಲಿಕೊಟ್ಟು, " ಎರಡನ್ನೂ ಸೇರಿಸು " ಎಂದನು. ಹಿರಣ್ಮಯಿಯು ಸೇರಿಸಿದಳು ; ಎರಡು ತುಂಡುಗಳೂ ಕೂಡಿದುವು. ಎರಡು ತುಂಡನ್ನು ಸೇರಿಸಿ ಓದೆಂದು ರಾಜನು ಹೇಳಿದ ಪ್ರಕಾರ ಹಿರಣ್ಮಯಿಯು ಓದಿದಳು, ಏನೆಂದರೆ--

" (ಜಾತಕವನ್ನು ಗುಣಿಸಿ ನೋಡಲಾಗಿ) ನೀವು ಯೋಚಿಸಿರುವಂತೆ ನಡೆಯಿಸತಕ್ಕುದಲ್ಲ. (ಹಿರಣ್ಮಯಿಯಂತಿರುವ ಸುವರ್ಣಪುತ್ತಳಿ) ಕೆಯನ್ನು ಚಿರಕಾಲ ಕಷ್ಟದಲ್ಲಿ ಹಾಕುವುದು ಸರಿಯಲ್ಲ. ಅವಳಿಗೆ (ವಿವಾಹವಾದರೆ ಭಯಂಕರವಾದ ವಿಪತ್ತು) ಉಂಟಾಗಿ, ಯಾವಜ್ಜೀವವೂ ಕಷ್ಟವುಂಟಾಗುವುದೆಂದು ಗುಣಿಸುವುದರಲ್ಲಿ ಗೊತ್ತಾಯಿತು. ಐದುವರ್ಷಗಳ ಪರ್ಯಂತ ದಂಪತಿಗಳು (ಮುಖವನ್ನು ಪರಸ್ಪರ) ದರ್ಶನ ಮಾಡದಿದ್ದರೆ ಈ ಗ್ರಹದಿಂದ ನಿಷ್ಕೃತಿಯುಂಟು (ಗಬಹುದು.) ಅದರ ವಿಧಾನವನ್ನು ನಾನು ಮಾಡುತ್ತೇನೆ "—

ಓದಿ ಪೂರೈಸಿದ ಬಳಿಕ ರಾಜನು, " ಆ ಕಾಗದವನ್ನು ಆನಂದಸ್ವಾಮಿಯು ನಿಮ್ಮ ತಂದೆಗೆ ಬರೆದುದು " ಎಂದು ಹೇಳಿದನು.

ಹಿರಣ್ಮಯಿ—ಅದೀಗ ಗೊತ್ತಾಯಿತು. ನನಗೆ ವಿವಾಹಕಾಲದಲ್ಲಿ ಕಣ್ಣುಗಳನ್ನು ಕಟ್ಟಿದ್ದರೇಕೆಂಬುದೂ ಗೋಪನವಾಗಿ ಅದ್ಭುತವಾದಾ ವಿವಾಹವು ಹಾಗೇಕೆ ಆಯಿತು, ಐದುವರ್ಷಗಳಾಗುವತನಕ ಉಂಗುರವನ್ನೇಕೆ ಹಾಕಿಕೊಳ್ಳಕೂಡದೆಂದು ನಿಷಿದ್ಧವಾಗಿತ್ತೆಂಬುದೂ ನನಗೀಗ ಗೊತ್ತಾಯಿತು. ಮತ್ತೇನನ್ನೂ ಅರಿಯೆನು.

ರಾಜ-ಕಾಗದವು ಬಂದಕೂಡಲೆ ನಿಮ್ಮ ತಂದೆಯು ನಿನ್ನನ್ನು ಪುರಂದರನಿಗೆ ಕೊಟ್ಟು ಮಾಡಬೇಕೆಂದು ನಿಷ್ಕರ್ಷೆಯಾಗಿದ್ದ ಮದುವೆಯನ್ನು

ನಿಲ್ಲಿಸಿಬಿಟ್ಟುದುದು ನಿನಗೆ ತಿಳಿದಿದೆ. ಪುರಂದರನಾ ದುಃಖದಿಂದ ಸಿಂಹಳ ದ್ವೀಪಕ್ಕೆ ಹೊರಟು ಹೋದನು. ಅದನ್ನು ನೀನು ತಿಳಿದಿರಬೇಕು.

ಇತ್ತಲಾಗಿ ಆನಂದಸ್ವಾಮಿಯು ವರಾನ್ವೇಷಣವನ್ನು ಮಾಡಿ ವರನ ಜಾತಕವನ್ನು ಶೋಧಿಸಿ ನೋಡಿದನು ; ವರನಿಗೆ ಎಂಭತ್ತೈದು ವರ್ಷದ ಮೇಲೆ ಆಯುಸ್ಸೆಂದು ಗೊತ್ತಾಯಿತು. ಆದರೆ ಅವನಿಗೆ ಇಪ್ಪತ್ತೆಂಟು ವರ್ಷ ಗಳಿಗೆ ಮುಂಚೆ ಒಂದು ದೊಡ್ಡ ಗಂಡವಿದ್ದಿತು. ಅದಲ್ಲದೆ, ಇಪ್ಪತ್ತೆಂಟು ವರ್ಷಕ್ಕೆ ಮುಂಚೆ, ಮತ್ತು ವಿವಾಹವಾದ ಐದುವರ್ಷಗಳೊಳಗೆ ಪತ್ನಿಯ ಶಯ್ಯೆಯಲ್ಲಿ ಮಲಗಿದರೆ ಅವನಿಗೆ ಮರಣವುಂಟೆಂತಲೂ ಅದು ಕಳೆದರೆ ದೀರ್ಘಜೀವಿಯೆಂತಲೂ ಗೊತ್ತಾಗಿದ್ದಿತು.

ಆದುದರಿಂದ ವರನಿಗೆ ಇಪ್ಪತ್ತುಮೂರು ವರ್ಷವಾದ ಬಳಿಕ ವಿವಾ ಹವು ಗೊತ್ತುಮಾಡಲ್ಪಟ್ಟದ್ದಿತು. ಆದರೆ ಅದುವರೆಗೆ ನೀನು ವಿವಾಹಿತೆಯಾ ಗದಿದ್ದರೆ, ಚಂಚಲೆಯಾಗುವೆ ಎಂತಲೂ ಅಥವಾ ಗೋಪ್ಯವಾಗಿ ಬೇರೆ ವಿವಾ ಹವನ್ನು ಮಾಡಿಕೊಳ್ಳದಿರಬೇಕೆಂತಲೂ ನಿನಗೆ ಭಯವಿರಲೆಂದು ಆ ಪತ್ರಾ ರ್ಥವು ನಿನ್ನ ಆಭರಣಗಳಲ್ಲಿ ಇಡಲ್ಪಟ್ಟಿತು.

ಅಲ್ಲದೆ ವಿವಾಹವಾದ ಐದು ವರ್ಷಗಳು ಪರಸ್ಪರ ನೋಡದಿರುವು ದಕ್ಕೆ ಬೇಕಾದ ಉಪಾಯಗಳನ್ನು ಕಲ್ಪಿಸಿದುದು ನಿನಗೆ ಗೊತ್ತಿದೆ. ಅದು ಕಾರಣ ಗಂಡಹೆಂಡಂದಿರಿಗೆ ಪರಸ್ಪರ ಪರಿಚಯವಾಗಲಿಲ್ಲ.

ಆದರೆ ಈಗ ಐದಾರು ತಿಂಗಳಿಂದ ಸ್ವಲ್ಪ ರಗಳೆಗಿಟ್ಟಿತು. ಆನಂದ ಸ್ವಾಮಿಯು ಇಲ್ಲಿಗೆ ಬಂದವನು ನೀನು ದಾರಿದ್ರ್ಯವಸ್ಥೆಯಲ್ಲಿರುವುದನ್ನು ಕೇಳಿ ದುಃಖಿತನಾದನು ; ಅವನು ನಿನ್ನನ್ನು ನೋಡುವುದಕ್ಕೆ ಬಂದನು ; ಆದರೆ ನೋಡಲಿಲ್ಲ ; ಅವನು ಬಂದು ನನ್ನನ್ನು ನೋಡಿ ನಿನ್ನ ವಿವಾಹದ ವೃತ್ತಾಂತವನ್ನು ಆನುಪೂರ್ವಕವಾಗಿ ಹೇಳಿ, "ಹಿರಣ್ಮಯಿಯು ದಾರಿದ್ರ್ಯ ವಸ್ಥೆಯಲ್ಲಿದ್ದುದು ನನಗೆ ತಿಳಿದಿದ್ದರೆ ಅದಕ್ಕೇನಾದರೂ ಮಾಡುತಿದ್ದೆನು ; ತಾವೇನಾದರೂ ಅದಕ್ಕೆ ಪ್ರತೀಕಾರವನ್ನು ಮಾಡಿದರೆ ಬಹಳ ಬಾಧ್ಯಪಡು ತ್ತೇನೆ. ಹಿರಣ್ಮಯಿಯು ಮತ್ತು ಅವಳ ಗಂಡನು ಪರಸ್ಪರ ನೋಡದಿರುವ ರೀತಿ ಮಾಡಬೇಕು" ಎಂದು ಹೇಳಿದನು. ನಿನ್ನ ಸ್ವಾಮಿಯ ಪರಿಚಯ ವನ್ನೂ ಹೇಳಿದನು. ತದಾರಭ್ಯ, ಅಮಲೆಯು ನಿನ್ನ ಮನೆಯ ವೆಚ್ಚವನ್ನು

ನಡೆಯಿಸುವಂತೆ ನಾನೇ ಏರ್ಪಾಡನ್ನು ಮಾಡಿದೆನು ; ನಿಮ್ಮ ತಂದೆಯ ಮನೆಯನ್ನು ನಾನೇ ಬೆಲೆಗೆ ತೆಗೆದು ನಿನಗೆ ವಾಸಕ್ಕೆ ಕೊಟ್ಟೆನು. ವಜ್ರದ ಹಾರವನ್ನು ನಾನೇ ನಿನ್ನಲ್ಲಿಗೆ ಕಳುಹಿಸಿದೆನು, ಅದು ನಿನ್ನ ಪರೀಕ್ಷಾರ್ಥವಾಗಿ.

ಹಿರಣ್ಮಯಿ—ಹಾಗಾದರೆ ತಮಗೆ ಆ ಉಂಗುರವೆಲ್ಲಿದ್ದಿತು ? ತಾವೇ ನನ್ನ ಸ್ವಾಮಿಯೆಂದು ಪರಿಚಯವಂ ಕೊಟ್ಟು ನನಗೆ ಮೋಸಗೊಳಿಸಿದಿರೇಕೆ ? ಪುರಂದರನ ಮನೆಯಲ್ಲಿ ಕ್ರಯದ ಹಣವನ್ನು ಕೊಡದೆ ವಾಸಮಾಡುವುದು ಸರಿಯಲ್ಲವೆಂದು ಆಕ್ಷೇಪಿಸೋಣವಾಯಿತೇಕೆ ?

ರಾಜ—ಆನಂದಸ್ವಾಮಿಯು ಬಂದು ನನಗೆ ಆ ವೃತ್ತಾಂತವನ್ನೆಲ್ಲ ಹೇಳಿದ ಬಳಿಕ ನಿನ್ನಮೇಲೆ ಕಾವಲಿರುವುದಕ್ಕೆ ಜನರನ್ನು ನೇಮಕಮಾಡಿದೆನು. ಅಂದು ಅಮಲೆಯ ಮುಖಾಂತರವಾಗಿ ಹಾರವನ್ನು ನಿನ್ನ ಬಳಿಗೆ ಕಳುಹಿದೆನು ; ಇಂದಿಗೆ ಐದು ವರ್ಷವು ಪೂರೈಸುವುದರಿಂದ ನಿನ್ನ ಸ್ವಾಮಿಯನ್ನು ಕರೆಯಿಸಿ ಅವನ ಮದುವೆಯ ವೃತ್ತಾಂತವನ್ನೆಲ್ಲಾ ಅವನಿಗೆ ಹೇಳಿ, ರಾತ್ರಿ ಹನ್ನೊಂದು ಘಳಿಗೆಗೆ ಸರಿಯಾಗಿ ಉಂಗುರವನ್ನು ತಂದಿಟ್ಟುಕೊಂಡಿದ್ದರೆ ಹೆಂಡತಿಯೊಡನೆ ಸೇರಬಹುದೆಂದು ಹೇಳಿದುದಕ್ಕೆ, ಅವನು, ಮಹಾರಾಜರ ಅಪ್ಪಣೆಯು ಶಿರೋಧಾರ್ಯವಾದುದಾದರೂ ಸಂಸಾರದಿಂದ ಸೇರಿರಲು ತನಗಿಷ್ಟವಿಲ್ಲವೆಂತಲೂ, ಏಕಾಂಗಿಯಾಗಿರುವೆನೆಂತಲೂ ಹೇಳಿದನು. ಅದು ಸರಿಯಲ್ಲ, "ನನ್ನ ಅಪ್ಪಣೆಯಪ್ರಕಾರ ನಡೆದುಕೊಳ್ಳತಕ್ಕುದು" ಎಂದು ಹೇಳಿದುದಕ್ಕೆ ಅವನೊಪ್ಪಿಕೊಂಡಿದ್ದಾನೆ ; ಆದರೆ ಆ ಹೆಂಗಸು ಸಚ್ಚರಿತ್ರದವಳೋ, ದುಶ್ಚರಿತ್ರದವಳೋ ಚೆನ್ನಾಗಿ ವಿಚಾರಿಸಬೇಕೆಂದೂ ದುಶ್ಚರಿತ್ರದವಳನ್ನು ತನ್ನ ಸಂಗಡ ಕೂಡಿ ಹಾಕಿದರೆ ರಾಜನಿಗೆ ಪಾಪಸ್ಪರ್ಶವಾಗುವುದೆಂದೂ ಹೇಳಿದನು. ಅದಕ್ಕೆ "ನಾನು ಉಂಗುರವನ್ನು ಕೊಟ್ಟು ಹೋಗು, ಅವಳ ಚರಿತ್ರೆಯನ್ನು ಪರೀಕ್ಷಿಸಿ ಹೇಳುವೆನು" ಎಂದೆನು. ಅವನು, "ಉಂಗುರವನ್ನಾರಿಗೂ ನಂಬಿ ಕೊಡಲಾರೆನು ; ಆದರೆ ತಮ್ಮಲ್ಲಿ ನಂಬಿ ಕೊಡುವೆನು" ಎಂದು ಹೇಳಿ ಉಂಗುರವನ್ನು ಕೊಟ್ಟನು. ನಾನು ಉಂಗುರವನ್ನು ಇಟ್ಟುಕೊಂಡು ನಿನ್ನನ್ನು ಪರೀಕ್ಷೆ ಮಾಡಿದುದರಲ್ಲಿ ನೀನು ಗೆದ್ದೆ.

ಹಿರಣ್ಮಯಿ—ತಾವು ಆವ ಪರೀಕ್ಷೆಯನ್ನು ಹೇಗೆ ಮಾಡೋಣವಾಯಿತೋ, ನಾನು ಹೇಗೆ ಜಯಿಸಿದೆನೋ ಅದೆನಗೆ ಗೊತ್ತಾಗಲಿಲ್ಲ.

ಹೀಗೆಂದು ಹೇಳುತಿದ್ದ ಸಮಯದಲ್ಲಿ ಅರಮನೆಯಲ್ಲಿ ಮಂಗಳ ಸೂಚಕವಾಗಿ ವಾದ್ಯಗಳು ಪ್ರಾರಂಭವಾದುವು. ರಾಜನು, "ರಾತ್ರಿ ಹನ್ನೊಂದು ಘಳಿಗೆಯಾಯಿತು; ಪರೀಕ್ಷೆಯ ವಿಚಾರವನ್ನು ಹಿಂದಳಿಂದ ಹೇಳುವೆನು; ಈಗ ನಿನ್ನ ಪತಿಯು ಬಂದಿದ್ದಾನೆ. ಶುಭಲಗ್ನದಲ್ಲಿ ಪರಸ್ಪರ ಶುಭದೃಷ್ಟಿಯಾಗಲಿ" ಎಂದನು.

ಆಗ ಹಿಂದುಗಡೆ ಕೊಠಡಿಯ ಬಾಗಿಲು ತೆರೆಯಲ್ಪಟ್ಟಿತು. ದೀರ್ಘಾಕಾರ ಪುರುಷನೊಬ್ಬನಾ ಬಾಗಿಲಿಂದ ಕೊಠಡಿಯೊಳಗೆ ಬಂದು ನಿಂತನು.

ರಾಜ—ಹಿರಣ್ಮಯಿ! ಇವನೇ ನಿನ್ನ ಸ್ವಾಮಿ.

ಹಿರಣ್ಮಯಿಯು ದೃಷ್ಟಿಸಿ ನೋಡಿದಳು. ಅವಳಿಗೇನೇನೂ ತೋರಲಿಲ್ಲ. ಜಾಗ್ರತಾವಸ್ಥೆ ಸ್ವಪ್ನಾವಸ್ಥೆ ಎಂಬ ಭೇದಜ್ಞಾನಶೂನ್ಯೆಯಾಗಿದ್ದಳು. ನೋಡಿದರೆ, ಪುರಂದರ!

ಅವರಿಬ್ಬರೂ ಪರಸ್ಪರ ನೋಡಿ ಸ್ತಂಭಿತರಾಗಿ ಉನ್ಮತ್ತಪ್ರಾಯರಾದರು; ಪರಸ್ಪರ ತಮ್ಮನ್ನು ತಾವೇ ನಂಬಲಾರದೆ ಹೋದರು.

ರಾಜನು ಪುರಂದರನನ್ನು ಕುರಿತು, "ಸ್ನೇಹಿತನೆ! ಹಿರಣ್ಮಯಿಯು ನಿನಗೆ ಯೋಗ್ಯೆಯಾದ ಪತ್ನಿ; ಆದುದರಿಂದ ಮನೆಗೆ ಕರೆದುಕೊಂಡು ಹೋಗು; ಅವಳು ಈಗಲೂ ಮೊದಲಿನಂತೆ ನಿನ್ನಲ್ಲಿ ಸ್ನೇಹಮಯಿಯಾಗಿದ್ದಾಳೆ; ನಾನವಳನ್ನು ರಾತ್ರಿ ಹಗಲು ಕಾವಲಿಟ್ಟು ನೋಡಿಕೊಳ್ಳುತ್ತಿದ್ದೆನಾದಕಾರಣ ಅವಳು ಅನನ್ಯಾನುರಾಗಿಣಿಯಾಗಿದ್ದಾಳೆಂದು ತಿಳಿದಿದ್ದೇನೆ; ನಿನ್ನ ಕೋರಿಕೆಯ ಪ್ರಕಾರ ಅವಳನ್ನು ಬಹುವಿಧವಾಗಿ ಪರೀಕ್ಷಿಸಿದೆನು; ನಾನೇ ಅವಳ ಸ್ವಾಮಿಯೆಂದು ಹೇಳಿದೆನು; ಆದರೆ ಅವಳು ರಾಜ್ಯಲೋಭದಿಂದಲೂ ನಿನ್ನನ್ನು ಮರೆಯಲಿಲ್ಲ; ನಾನೇ ಅವಳ ಸ್ವಾಮಿಯೆಂದು ಇಂಗಿತದಿಂದ ತಿಳಿಯ ಹೇಳಿ, ಅವಳು ನಿನ್ನಲ್ಲಿ ಅಸತ್ಪ್ರಣಯಾಸಕ್ತೆಯಾಗಿದ್ದಳೆಂದು ಸಂದೇಹಪಟ್ಟವನಂತೆ ಕೆಲವು ಸಂಗತಿಗಳನ್ನು ಹೇಳಿದೆನು: ಅದಕ್ಕವಳು ದುಃಖಿತೆಯಾಗಿ, ತಾನು ನಿರ್ದೋಷಿಯೆಂತಲೂ, ತನ್ನನ್ನು ಗ್ರಹಣಮಾಡಬೇಕೆಂದೂ ಹೇಳಿದ್ದರೆ ನಿನ್ನನ್ನು ಅವಳು ಶುದ್ಧವಾಗಿ ಮರೆತಳೆಂದು ಹೇಳುತ್ತಿದ್ದೆನು; ಆದರೆ ಹಿರಣ್ಮಯಿಯು ಹಾಗೆ ಹೇಳದೆ, "ಮಹಾರಾಜರೆ! ನಾನು ಅಸತಿ, ನನ್ನನ್ನು ತ್ಯಾಗಮಾಡಿಬಿಡಿ" ಎಂದು ಹೇಳಿಕೊಂ

ಹಳು" ಎಂ ಹೇಳಿ, ಂತರ ಹಿರಣ್ಮಯಿಯನ್ನು ಕುರಿತು, "ಹಿರಣ್ಮಯಿ! ನಿನ್ನಾ ಕಾಲದ ಮನೋಭಾವಗಳನ್ನೆಲ್ಲ ಚೆನ್ನಾಗಿ ತಿಳಿದುಕೊಂಡೆನು; ನೀನು ಅನ್ಯಪತಿಯ ಸಂಸರ್ಗಮಾಡತಕ್ಕುದಲ್ಲವೆಂದೂ ನಾನು ಅಸತಿಯೆಂದೂ ಹೇಳಿಕೊಂಡೆ. ನೀವಿಬ್ಬರೂ ಸುಖವಾಗಿರಬೇಕೆಂದು ನಾನು ಆಶೀರ್ವಾದ ಮಾಡುತ್ತೇನೆ" ಎಂದನು.

ಹಿರಣ್ಮಯಿ—ಮಹಾರಾಜನೆ! ನನಗೆ ಮತ್ತೊಂದು ಸಂಗತಿಯನ್ನು ತಿಳಿಯಹೇಳಬೇಕು. ಇವರು ಸಿಂಹಳ ದ್ವೀಪದಲ್ಲಿದ್ದರು. ಕಾಶಿಯಲ್ಲಿ ನನಗೂ ಅವರಿಗೂ ಪರಿಣಯವಾದುದು ಹೇಗೆ? ಅವರು ಸಿಂಹಳದಿಂದ ಕಾಶೀಗೆ ಬಂದಿದ್ದರೆ ನಮಗೇಕೆ ಗೊತ್ತಾಗಲಿಲ್ಲ?

ರಾಜ—ಆನಂದಸ್ವಾಮಿಯೂ ಪುರಂದರನ ತಂದೆಯೂ ಆಲೋಚಿಸಿಕೊಂಡು ಜನರು ಹೋಗಿ ಅವನನ್ನು ಸಿಂಹಳದಿಂದ ಕಾಶೀಗೆ ಕರೆದುಕೊಂಡು ಹೋಗಿದ್ದರು. ಪುನಃ ಸಿಂಹಳಕ್ಕೆ ಹೊರಟುಹೋದನು. ತಾವು ಲಿಪ್ತಕ್ಕೆ ಬರಲಿಲ್ಲವಾದುದರಿಂದ ನಿಮಗಾರಿಗೂ ತಿಳಿಯಲಿಲ್ಲ.

ಪುರಂದರ—ಮಹಾರಾಜನೆ! ತಾವು ಹೇಗೆ ನಮ್ಮ ಚಿರಕಾಲದ ಮನೋರಥವನ್ನು ಪೂರ್ಣಮಾಡೋಣವಾಯಿತೋ, ಹಾಗೆ ಜಗದೀಶ್ವರನು ತಮ್ಮ ಸಕಲ ಮನೋರಥಗಳನ್ನೂ ಪೂರ್ಣಮಾಡಲಿ. ಇಂದು ನಾವು ಹೇಗೆ ಸುಖಿಗಳಾದೆವೋ ಅಂತಹ ಸುಖಶಾಲಿಗಳು ತಮ್ಮ ರಾಜ್ಯದಲ್ಲಿ ಹಿಂದಾವಾಗಲೂ ವಾಸವಾಗಿರಲಿಲ್ಲ.

Printed by P. Pallonjee at the G. T. A. Press, Mysore.